ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 24, ₹12

Volume -13
Issue - 11
November - 2016

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

## ವೀರ ವನಿತೆಯರ ನಾಡಿನ 61ನೇ ಕನ್ನಡ ರಾಜ್ಯೋತ್ಸವ



ರಾಣಿ ಅಬ್ಬಕ್ಕ

1 ಕನ್ನಡ ರಾಜ್ಯೋತ್ಸವ
14 ಗುರುನಾನಕ್, 17 ಕನಕ ಜಯಂತಿ ಶುಭಾಷಯಗಳು

– ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ





▶▶ ಸೌಹಾರ್ದ ಸಹಕಾರಿಗಳ ಸಂಖ್ಯೆ : 3851 ▶▶ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 986

# ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆ



ಕೇವಲ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಮತ್ತು ಸಂಯುಕ್ತ ಸಹಕಾರಿಯ ಒಳಿತಿಗಾಗಿ ಕಾರ್ಯನಿರ್ವಹಿಸುವಾಗ ಕೆಲ ಆಪಾದನೆಗಳು ಬರುವುದು ಸಹಜ. ಸಾರ್ವಜನಿಕ ವ್ಯವಸ್ಥೆಯಲ್ಲಿ ಇವುಗಳು ಅನಿವಾರ್ಯ. ಆದರೆ, ಆತ್ಮ ಸಾಕ್ಷಿಯಾಗಿ, ಪಾರದರ್ಶಕವಾಗಿ ಕಾರ್ಯನಿರ್ವಹಿಸಿರುವುದರಿಂದ ಆಪಾದನೆಗಳಲ್ಲಿ ಹುರುಳಿಲ್ಲ ಎಂಬುದನ್ನು ಸಹಕಾರಿಗಳು ಗಮನಿಸಬೇಕು.

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕನ್ನಡ ರಾಜ್ಯೋತ್ಸವ, ಗುರುನಾನಕ ಜಯಂತಿ ಹಾಗೂ ಕನಕದಾಸ ಜಯಂತಿಯ ಹಾರ್ದಿಕ ಶುಭಾಷಯಗಳು.

ರಾಜ್ಯದ ಸೌಹಾರ್ದ ಸಹಕಾರ ಕ್ಷೇತ್ರದ ವೇಗದ ಬೆಳವಣಿಗೆಗೆ ಸಂಯುಕ್ತ ಸಹಕಾರಿಯ ಪಾರದರ್ಶಕ ಆಡಳಿತ ಹಾಗೂ ಗಟ್ಟಿ ನಿರ್ಧಾರಗಳಿಂದಾಗಿ ಸಂಯುಕ್ತ ಸಹಕಾರಿ ಉತ್ತಮ ಸಾಧನೆಗಳನ್ನು ಮಾಡಲಿಕ್ಕೆ ಸಾಧ್ಯವಾಗಿದೆ. ಇದರಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಸಾಧ್ಯವಾಗಿದೆ. ಇದಕ್ಕೆಲ್ಲ ಬೆಂಬಲಿಸಿದ ಸಂಯುಕ್ತ ಸಹಕಾರಿಯ ಎಲ್ಲಾ ಆಡಳಿತ ಮಂಡಲಿ ಸದಸ್ಯರಿಗೆ ಹಾಗೂ ಸಕಾರಾತ್ಮಕವಾಗಿ ಸ್ಪಂದಿಸಿದ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ದಿನಾಂಕ : 20.10.2016ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯ ನಂತರ ನಡೆದ ಔಪಚಾರಿಕ ಸಭೆಯಲ್ಲಿ ಆಡಳಿತ ಮಂಡಲಿ ಸದಸ್ಯರೆಲ್ಲಾ 2011–2016ರ ಅವಧಿಯಲ್ಲಿ ಉತ್ತಮ ಕೆಲಸಕಾರ್ಯಗಳು ನಡೆದಿವೆ ಎಂದು ತಮ್ಮ ಅಭಿಪ್ರಾಯಗಳನ್ನು ತಿಳಿಸಿರುವುದು, ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಕಾರ್ಯನಿರ್ವಹಿಸಲು ಅವಕಾಶವಾಗಿರುವುದು, ಈ ಅವಕಾಶ ಸದುಪಯೋಗವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಲು ಅವಕಾಶವಾಗಿರುವುದಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಗಳನ್ನು ತಿಳಿಸಿರುವುದು ಅತ್ಯಂತ ಸಂತೋಷದ ಹಾಗೂ ಸ್ವಾಗತಾರ್ಹವಾಗಿದೆ.

ಕೇವಲ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಮತ್ತು ಸಂಯುಕ್ತ ಸಹಕಾರಿಯ ಒಳಿತಿಗಾಗಿ ಕಾರ್ಯನಿರ್ವಹಿಸುವಾಗ ಕೆಲ ಆಪಾದನೆಗಳು ಬರುವುದು ಸಹಜ. ಸಾರ್ವಜನಿಕ ವ್ಯವಸ್ಥೆಯಲ್ಲಿ ಇವುಗಳು ಅನಿವಾರ್ಯ. ಆದರೆ, ಆತ್ಮ ಸಾಕ್ಷಿಯಾಗಿ, ಪಾರದರ್ಶಕವಾಗಿ ಕಾರ್ಯನಿರ್ವಹಿಸಿರುವುದರಿಂದ ಆಪಾದನೆಗಳಲ್ಲಿ ಹುರುಳಿಲ್ಲ ಎಂಬುದನ್ನು ಸಹಕಾರಿಗಳು ಗಮನಿಸಬೇಕು.

2011–2016ರ ಆಡಳಿತ ಮಂಡಲಿಯ ಅಧಿಕಾರದ ಅವಧಿಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆ 3800 ಗಡಿ ದಾಟಿದೆ, ಇ–ಸ್ಟ್ಯಾಂಪಿಂಗ್ ಕೇಂದ್ರಗಳ ಸಂಖ್ಯೆ 986ಕ್ಕೆ ತಲುಪಿದೆ, ಸಂಯುಕ್ತ ಸಹಕಾರಿಗೆ ತನ್ನದೇ ಆದ ಕಟ್ಟಡವಾಗಿದೆ, ವಿಭಾಗೀಯ ಕಛೇರಿಗಳು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ನೇಮಕವಾಗಿ ಸಿಬ್ಬಂದಿಯ ಸಂಖ್ಯೆ 70ಕ್ಕೆ ತಲುಪಿರುವುದು, ಸೌಹಾರ್ದ ಸಹಕಾರಿಗಳಿಗಾಗಿ ಪ್ರತ್ಯೇಕ ನ್ಯಾಯಾಲಯ ಸ್ಥಾಪಿಸಿರುವುದು, ಸೌಹಾರ್ದ ಸಹಕಾರಿಗಳಿಗೆ ಅನುಕೂಲವಾಗುವ ಅನೇಕ ಪ್ರಕಟಣೆಗಳನ್ನು ಪ್ರಕಟಿಸಿರುವುದು, ಸೌಹಾರ್ದ ಸಹಕಾರಿಗಳಿಗೆ ಎನ್.ಸಿ.ಡಿ.ಸಿ. ಹಾಗೂ ನಬಾರ್ಡ್‌ಗಳಿಂದ ಮರುಹಣಕಾಸು ವ್ಯವಸ್ಥೆ ಮಾಡಿರುವುದು, ನೇರ ತೆರಿಗೆ ಸಂಹಿತೆ ಜಾರಿಗೆ ಬರದಂತೆ ಸತತ ಪ್ರಯತ್ನಿಸುತ್ತಿರುವುದು, ಥರ್ಡ್ ಪಾರ್ಟಿ ಚೆಕ್ ಕಲೆಕ್ಷನ್‌ಗೆ ಅವಕಾಶವಾಗಿರುವುದು ಹೀಗೆ ಅನೇಕ ಸಾಧನೆಗಳು ಈ ಅವಧಿಯಲ್ಲಿ ನಡೆದಿರುವುದಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳು ನೀಡಿರುವ ಪ್ರೋತ್ಸಾಹವೇ ಕಾರಣ. ಎಲ್ಲರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

**ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ ..... 4
ಸಹಕಾರ ಕ್ಷೇತ್ರಕ್ಕೆ ನವಚೈತನ್ಯ ತುಂಬುವ ಶಕ್ತಿ ಯುವಕರಲ್ಲಿದೆ - ಶ್ರೀ ಗುರುನಾಥ ಜಾಂತಿಕರ ..... 5
ವಿಶ್ವ ಸಹಕಾರ ಕ್ಷೇತ್ರದಲ್ಲಿ ಭಾರತದ ಸಹಕಾರ ಕ್ಷೇತ್ರದ ಸಾಧನೆ ಗಮನಾರ್ಹ - ಶ್ರೀ ಎಸ್.ಆರ್.ಸತೀಶ್‌ಚಂದ್ರ ..... 6
ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಸಿಬ್ಬಂದಿಯವರಿಂದ ಅಭಿನಂದನಾ ಸಭೆ ..... 8
ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಜರುಗಿರುವ ಸಾಮಾನ್ಯ ಸಭೆಯ ವರದಿ ..... 12
ಪ್ರಶ್ನೆ-ಉತ್ತರ ..... 17
ಮಾರಾಬಾಧಿಕಾರಿಯು ಕೈಗೊಳ್ಳಬೇಕಾದ ಕ್ರಮ ..... 18
ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ ..... 20
RBI NEWS-OCTOBER-2016 ..... 21
Co Operative Movement in India and Abroad - The Road Ahead ..... 23

# ಸಂಪಾದಕೀಯ

## 63ನೇ ಅಖಿಲ ಭಾರತ ಸಹಕಾರ ಸಪ್ತಾಹ - 2016
## ಸಹಕಾರ ಕ್ಷೇತ್ರದ ಬಗ್ಗೆ ಸಾರ್ವಜನಿಕ ವಿಶ್ವಾಸಾರ್ಹತೆ ಬೆಳೆಸುವ ನಿಟ್ಟಿನಲ್ಲಿ ಅರ್ಥಪೂರ್ಣ ಆಚರಣೆ ಅಗತ್ಯ

ಪ್ರತಿ ವರ್ಷ ರಾಷ್ಟ್ರದಾದ್ಯಂತ ಸಹಕಾರ ಸಪ್ತಾಹವನ್ನು ಆಚರಿಸಲಾಗುತ್ತದೆ. ಸಹಕಾರ ಸಪ್ತಾಹದ ಆಚರಣೆ ಹಾಗೂ ಉದ್ದೇಶ ಸಹಕಾರಿಗಳಿಗೆ ಸಹಕಾರ ಚಳುವಳಿಯ ಆಶಯದ ಪೂರ್ಣ ಅರಿವಾಗಬೇಕು, ಸಾಧನೆಗಳನ್ನು ತಿಳಿದಿರಬೇಕು, ಸವಾಲುಗಳನ್ನು ಅಧ್ಯಯನ ಮಾಡಬೇಕು, ಪರಿಹಾರ ಕಂಡುಕೊಳ್ಳಬೇಕು, ನಂತರ ಸಾರ್ವಜನಿಕರಿಗೆ ಈ ಕ್ಷೇತ್ರದ ಬಗ್ಗೆ ವಿಶ್ವಾಸ ಮೂಡಿಸುವ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕು, ಸದಸ್ಯರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ತಾಣ ಇದಾಗಬೇಕು ಎಂದು ಅರ್ಥೈಸಲಾಗಿದೆ.

ಈ ದೇಶದ ಸಹಕಾರ ಚಳುವಳಿ ರಾಷ್ಟ್ರದ ಅರ್ಥ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ, ಉತ್ತಮ ಆರ್ಥಿಕ ಸಂಘಟನೆಗಳಾಗಿ, ಬಡವರ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ, ರೈತರ ಅಭಿವೃದ್ಧಿಯ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಲಾಗುತ್ತದೆ. ವಿಶ್ವಕ್ಕೆ ಮಾದರಿಯಾಗುವಂತಹ ಅನೇಕ ಉತ್ತಮ ಸಹಕಾರ ಸಂಸ್ಥೆಗಳು ನಮ್ಮ ದೇಶದಲ್ಲಿವೆ. ಇವುಗಳ ವಿಶ್ವರೂಪ ದರ್ಶನ ಈ ಸಪ್ತಾಹದ ಆಚರಣೆಯಲ್ಲಿ ನಡೆದು ಸಹಕಾರ ಕ್ಷೇತ್ರದ ಬಗ್ಗೆ ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆ ಹೆಚ್ಚುವಂತಾಗಬೇಕು ಎಂಬುದು ಈ ಆಚರಣೆಯ ಮುಖ್ಯ ಧ್ಯೇಯವಾಗಬೇಕು. ಈ ಬಾರಿಯ ಸಪ್ತಾಹದ ಆಚರಣೆಯ ಧ್ಯೇಯವಾದರೂ "ಸುಸ್ಥಿರ ಅಭಿವೃದ್ಧಿ ಹಾಗೂ ಬೆಳವಣಿಗೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ಎಂಬುದಾಗಿದೆ. ಈ ಬಗ್ಗೆ ಹೆಚ್ಚಿನ ಚಿಂತನೆ ನಡೆಯುವುದು ಅವಶ್ಯಕ.

ಸಹಕಾರ ಕ್ಷೇತ್ರ ಈ ದೇಶದಲ್ಲಿ ವಿಫಲವಾಗಿದೆ, ಆದರೆ ಸಫಲತೆಯನ್ನು ಸಾಧಿಸಲೇಬೇಕು ಎಂದು ತಜ್ಞರು ಕಾಲಕಾಲಕ್ಕೆ ಹೇಳುತ್ತಲೇ ಬಂದಿದ್ದಾರೆ. 112 ವರ್ಷಗಳ ಸುದೀರ್ಘ ಕಾರ್ಯಾಚರಣೆ ಮಾಡಿದ ನಂತರವೂ ಇನ್ನೂ ಹಲವಾರು ಸಮಸ್ಯೆಗಳು ನಿವಾರಣೆಯಾಗದಿರುವುದು ವಿಷಾದಕರ. ಅಂದರೆ ಸಹಕಾರ ಕ್ಷೇತ್ರದ ಕಾರ್ಯಾಚರಣೆಯಲ್ಲಿ ಇರುವ ತೊಂದರೆಗಳ ನಿವಾರಣೆಗೆ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು, ಸಹಕಾರಿಗಳು, ಆರ್ಥಿಕ ತಜ್ಞರು ಗಂಭೀರವಾಗಿ ಯೋಚಿಸುವುದು ಅಗತ್ಯ. ಮುಂಬರುವ ದಿನಗಳಲ್ಲಿ ಸಹಕಾರ ಚಳುವಳಿ ಚಳುವಳಿಯಾಗಿ ಮುಂದುವರೆಯದೇ ನಿಜ ಅರ್ಥದಲ್ಲಿ ಈ ದೇಶದ ಅರ್ಥ ವ್ಯವಸ್ಥೆಯ ಒಂದು ಭಾಗವಾಗಿ ಕಾರ್ಯನಿರ್ವಹಿಸುವುದು ಅಗತ್ಯವಲ್ಲವೇ. ಈ ಬಾರಿಯ ಸಹಕಾರ ಸಪ್ತಾಹ ಆಚರಣೆ ಈ ನಿಟ್ಟಿನಲ್ಲಿ ಗಂಭೀರವಾಗಿ ಆಲೋಚಿಸುತ್ತದೆ ಎಂದು ಭಾವಿಸೋಣ. ■



## ಜ್ಞಾನ ಜ್ಯೋತಿ

ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ಯಶಸ್ಸಿನ ಮೂರು ಮೂಲ ಸೂತ್ರಗಳು

ಗುರು ಶಿಷ್ಯರ ಮಧ್ಯೆ ನಡೆದ ಸಂವಾದ. ಬದುಕನ್ನು ಶ್ರೀಮಂತ ಮಾಡುವುದಕ್ಕೆ ಏನು ಬೇಕು? ಅದು ಮೂಲ ಪ್ರಶ್ನೆ. ಗುರು ಉತ್ತರಿಸುತ್ತಿದ್ದಾರೆ. ಅದಕ್ಕೆ ಒಳ್ಳೆಯ ಹೃದಯ ಬೇಕು, ಭಾವನೆಗಳು ಬೇಕು, ಅದು ನಿಜವಾದ ಶ್ರೀಮಂತಿಕೆ. ಹಲವು ಬಗೆಯ ಸಂಪತ್ತುಗಳಿವೆ. ಭೌತಿಕ ಸಂಪತ್ತು ಇದೆ, ದೈಹಿಕ ಸಂಪತ್ತು ಇದೆ, ವಿದ್ಯಾ ಸಂಪತ್ತು, ಬುದ್ಧಿ ಸಂಪತ್ತು.... ಹಾಗೇ ಜನ ಸಂಪತ್ತು ಇದೆ. ಯಾವುದು ಮನುಷ್ಯನ ಬದುಕನ್ನು ಶ್ರೀಮಂತಗೊಳಿಸುತ್ತದೆ ಅದು ನಿಜವಾದ ಸಂಪತ್ತು. ಏನೆಲ್ಲಾ ಸಂಪತ್ತು ಇದ್ದು ಬದುಕಿನಲ್ಲಿ ಸಂತೋಷ ಇರದಿದ್ದರೆ! ಏನು ಬಂತು? ಬದುಕಿನ ಸಂಪತ್ತಿಗೆ ಬೆಲೆ ಕಟ್ಟಲು ಬರುವುದಿಲ್ಲ.

ವಸ್ತುವಿನ ಬೆಲೆ ಹೊರಗಿನಿಂದ ಬರುವುದಲ್ಲ, ಒಳಗಿನಿಂದ ಬರಬೇಕು. ಅದು ಬದುಕನ್ನು ಶ್ರೀಮಂತಗೊಳಿಸುತ್ತದೆ. ಬದುಕು ಸಂಪದ್ಭರಿತವಾಗಬೇಕಾದರೆ ಒಳಗಿನ ಸಂಪತ್ತು ಇರಬೇಕು. ಜೀವನದಲ್ಲಿ ಏನೆಲ್ಲಾ ಪಡೆದುಕೋ ಆದರೆ ಒಳಗೆ ಒಂದಿಷ್ಟು ಸಂತೋಷಪಡದಿದ್ದರೆ ಎಲ್ಲಾ ನಿರರ್ಥಕ.

'ತುಕಾರಾಮ' ಹೆಸರು ಕೇಳಿದ್ದೀರಿ, ಆತನಿಗೆ ಮನೆಯಲ್ಲಿ ಏನೂ ಇರಲಿಲ್ಲ. ತಿನ್ನಲಿಕ್ಕೂ ಇರಲಿಲ್ಲ. ಇವನ ಸ್ಥಿತಿಯನ್ನು ನೋಡಿ ಶಿವಾಜಿ ಮಹಾರಾಜರು ನೀನು ನನ್ನ ರಾಜ್ಯದಲ್ಲಿದ್ದೀಯಾ ಒಂದಿಷ್ಟು ಸಂಪತ್ತು ತೆಗೆದುಕೋ ಸುಖವಾಗಿರು... ಎಂದು ಹೇಳಿ ಆಳುಗಳ ಮೂಲಕ ಸಂಪತ್ತು ಕಳುಹಿಸಿದರು. ತುಕಾರಾಮ ಅದೇ ಸೇವಕರ ಮೂಲಕ ಶಿವಾಜಿಗೆ– "ತುಕಾರಾಮನಂತ ಶ್ರೀಮಂತ ಈ ಜಗತ್ತಿನಲ್ಲಿ ಬೇರೊಬ್ಬನಿಲ್ಲ" ಎಂದು ಹೇಳಿ ಕಳುಹಿಸುತ್ತಾನೆ. I am the richer then the Richest. ಈ ಜಗತ್ತಿನ ಶ್ರೀಮಂತರಿಗಿಂತ ಒಂದು ಗುಂಜು ಶ್ರೀಮಂತಿಕೆ ನನಗೆ ಜಾಸ್ತಿ ಇದೆ ಎಂದ. ಏನು ಭಾವನೆ ಅದು. ಹೊರಗಿನದು ಶ್ರೀಮಂತಿಕೆ ಅಲ್ಲ, ಒಳಗಿನದು ಶ್ರೀಮಂತಿಕೆ.

ಓದಿದರೆ ಜ್ಞಾನ ಸಿಗುತ್ತದೆ, ವ್ಯಾಯಾಮ ಮಾಡಿದರೆ ಶಕ್ತಿ ಬರುತ್ತದೆ. ಆದರೆ, ನಗುವುದನ್ನು ಕಲಿಸುವುದು ಹೇಗೆ? ಅದು ಬರೀ ನಗುವುದಲ್ಲ. It is not a laugh, smile... ಅದು ಹೃದಯ ಅರಳಿ ಹೊರಹೊಮ್ಮಿದಂತೆ.

ನಾವು ನಗಬೇಕು ಅಂದರೆ, ಹೀಗೇ ಆಗಬೇಕು ಅಂದರೆ, ಅದು ಹಾಗೆ ಆಗುವುದಿಲ್ಲ... ಸಾಧನೆ ಮಾಡಬೇಕು. ಸಿದ್ಧಿಯಾಗಬೇಕಾದರೆ ಸಾಧನೆ ಮಾಡಬೇಕು. ಸಾಧನೆಗಳಲ್ಲಿ ಅನೇಕ ಪ್ರಕಾರಗಳು, ಬಹಳ ಮುಖ್ಯವಾಗಿ ಎರಡು ಸಾಧನೆಗಳು, ಒಂದು 'ಕಠಿಣ' ಸಾಧನೆ, ಇನ್ನೊಂದು 'ಸುಲಭ' ಸಾಧನೆ. ಕೆಲವು ಸಾಧನೆಗಳು ಸುಲಭ ಅನಿಸಬಹುದು. ಇನ್ನು ಕೆಲವು ಕಠಿಣ ಅನಿಸಬಹುದು. ಮನುಷ್ಯ ಬಯಸೋದು ಸುಲಭ ಸಾಧನೆಯನ್ನು, ಅದು ಸರಳವಾಗಿರಬೇಕು. ಸಾಧನೆ ಸವಿಸವಿಯಾಗಿರಬೇಕು. ಪ್ರತಿಕ್ಷಣ ಸಾಧನೆ ಮಾಡುವಾಗ ಸುಖ ಸಿಗುತ್ತಿರಬೇಕು. ಯಾವುದನ್ನು ಮಾಡುವುದಕ್ಕೆ ಉತ್ಸಾಹ ಇರುತ್ತದೆ ಅದು ಸುಲಭ ಸಾಧನೆ. ಉತ್ಸಾಹ ಇಲ್ಲದೇ ಮಾಡುವ ಸಾಧನೆ ಕಠಿಣ ಅನಿಸುತ್ತದೆ. ಯಾವುದೇ ಕೆಲಸ ಮಾಡಲು ಉತ್ಸಾಹವಿದೆ... ಆ ಕೆಲಸ ಸರಳವಾಗುತ್ತದೆ, ಉತ್ಸಾಹವಿಲ್ಲ... ಕಠಿಣವಾಗುತ್ತದೆ. ಬದುಕಿನಲ್ಲಿ ಉತ್ಸಾಹ ಬಹಳ ಮುಖ್ಯ, ಬಹಳ ಮಹತ್ವದ್ದು.

ಮೊದಲನೆಯದು ಉತ್ಸಾಹ, ಎರಡನೆಯದು ಪಡೆಯಲೇಬೇಕೆಂಬ ನಿರ್ಧಾರ, ಸಂಕಲ್ಪ. ಇದನ್ನು ಮಾಡಲೇಬೇಕು, ಪಡೆದೇ ತೀರಬೇಕು ಎಂಬ ನಿರ್ಧಾರ ಇರಬೇಕು. ಮೂರನೆಯದು ಈ ನಿರ್ಧಾರವನ್ನು ಕ್ರಿಯಾರೂಪ ಮಾಡಬೇಕಾದರೆ ಸ್ವಲ್ಪ ತ್ಯಾಗ ಮಾಡಬೇಕಾಗುತ್ತದೆ. ಆಕರ್ಷಣೆಗಳನ್ನು ಸ್ವಲ್ಪ ತ್ಯಾಗ ಮಾಡಬೇಕು. ಏಕೆಂದರೆ ಸಾಧಿಸಬೇಕಲ್ಲ. ಇದು ಸ್ವಲ್ಪ ಕಷ್ಟ ಆಗುತ್ತದೆ. ತ್ಯಾಗ ಬಹಳ ಮಹತ್ವದ್ದು, ಬದುಕು ಅಮೃತವಾಗಬೇಕಾದರೆ ಒಂದಿಷ್ಟು ತ್ಯಾಗ ಮಾಡಬೇಕು.

**ದಿನಾಂಕ : 14 ನವೆಂಬರ್ 2016 ರಿಂದ 20 ನವೆಂಬರ್ 2016ರವರೆಗೆ ರಾಷ್ಟ್ರದಾದ್ಯಂತ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ**

**ದಿನಾಂಕ : 19.11.2016ರಂದು ಮಂಡ್ಯದಲ್ಲಿ ಸಹಕಾರ ಸಪ್ತಾಹ : "ಸಹಕಾರ ಸಂಸ್ಥೆಗಳು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು" ದಿನಾಚರಣೆ**

## ಸೌಹಾರ್ದ ಸಹಕಾರಿಗಳು ಸಕ್ರಿಯವಾಗಿ ಭಾಗವಹಿಸಲು ಸೂಚನೆ

63ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 19.11.2016ರಂದು "ಸಹಕಾರ ಸಂಸ್ಥೆಗಳು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು" ದಿನಾಚರಣೆಯನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕರ್ನಾಟಕ ರಾಜ್ಯ ಮೀನುಗಾರರ ಸಹಕಾರ ಮಹಾಮಂಡಳ ನಿ., ಇವರುಗಳ ಸಹಯೋಗದೊಂದಿಗೆ ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳ ಹಾಗೂ ಸೌಹಾರ್ದ ಸಹಕಾರಿಗಳು ಸಂಯುಕ್ತವಾಗಿ ಆಚರಿಸಲು ದಿನಾಂಕ 24.10.2016ರಂದು ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಶ್ರೀ ಹೆಚ್.ಸಿ.ಜೋಷಿ, ಸಹಕಾರಿಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ಇವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಈ ಸಭೆಯಲ್ಲಿ ಅಪೆಕ್ಸ್ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ರಮಣ ರೆಡ್ಡಿ, ಮಂಡ್ಯ ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹರೀಶ್, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಜಿಲ್ಲಾ ಸಹಕಾರಿ ಉಪನಿಬಂಧಕರಾದ ಶ್ರೀ ಕುಮಾರ್, ಜಿಲ್ಲಾ ಸಹಕಾರ ಯೂನಿಯನ್‌ನ ಶ್ರೀ ನಾಗೇಂದ್ರ ಹಾಗೂ ಜಿಲ್ಲೆಯ ಅನೇಕ ಪ್ರಮುಖ ಸಹಕಾರಿಗಳು, ಅಧಿಕಾರಿಗಳು ಭಾಗವಹಿಸಿದ್ದರು.

ದಿನಾಂಕ 19.11.2016ರಂದು ಮಂಡ್ಯದಲ್ಲಿ ಆಚರಿಸಲಾಗುತ್ತಿರುವ "ಸಹಕಾರ ಸಂಸ್ಥೆಗಳು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು" ಸಹಕಾರ ಸಪ್ತಾಹ ದಿನಾಚರಣೆಯಲ್ಲಿ ಮಂಡ್ಯ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳು ಸಕ್ರಿಯವಾಗಿ ಭಾಗವಹಿಸಿ, ಸಹಕಾರ ಸಪ್ತಾಹವನ್ನು ಯಶಸ್ವಿಯಾಗಿಸಲು ಸಂಯುಕ್ತ ಸಹಕಾರಿಯು ಕೋರುತ್ತದೆ.

## ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 2016-17 ರಿಂದ 2020-21ರವರೆಗಿನ ಆಡಳಿತ ಮಂಡಲಿ ಚುನಾವಣೆಯನ್ನು ದಿನಾಂಕ : 27.11.2016ರಂದು ನಡೆಸಲು ಚುನಾವಣಾಧಿಕಾರಿಗಳು ನಿಗದಿ ಮಾಡಿದ್ದಾರೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಚುನಾವಣೆಯಲ್ಲಿ ಭಾಗವಹಿಸಲು ಅರ್ಹತೆ ಪಡೆಯಲು ದಿನಾಂಕ 07.11.2016ರ ಒಳಗಾಗಿ ಪ್ರಸಕ್ತ ಸಾಲಿನದೂ ಸೇರಿದಂತೆ ಸಂಯುಕ್ತ ಸಹಕಾರಿಗೆ ಪಾವತಿಸಬೇಕಿರುವ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಸಂಯುಕ್ತ ಸಹಕಾರಿಗೆ ಪಾವತಿಸಿರತಕ್ಕದ್ದು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಕಡ್ಡಾಯವಾಗಿ ಕಳುಹಿಸಿರತಕ್ಕದ್ದು.

ಚುನಾವಣಾ ಪ್ರಾಧಿಕಾರದವರು ನಿಗದಿ ಮಾಡಿರುವ ಡೆಲಿಗೇಷನ್ ಫಾರ್ಮ್‌ನ್ನು ನಿಗದಿತ ನಮೂನೆಯಲ್ಲಿಯೇ ಯಥಾವತ್ತಾಗಿ ಭರ್ತಿ ಮಾಡಿ ಕಳುಹಿಸಿರತಕ್ಕದ್ದು ಮತ್ತು ಚುನಾವಣಾಧಿಕಾರಿಗಳು ಪರಿಶೀಲನೆಗಾಗಿ ಸೂಚಿಸುವ ದಾಖಲೆಗಳನ್ನು ಸೌಹಾರ್ದ ಸಹಕಾರಿಗಳು ಒದಗಿಸುವ ಕ್ರಮವಿಡುವುದು.

ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ : 21. (ಬೆಂಗಳೂರು ವಿಭಾಗದಿಂದ 6, ಮೈಸೂರು ವಿಭಾಗದಿಂದ 2, ಬೆಳಗಾವಿ ವಿಭಾಗದಿಂದ 7 ಹಾಗೂ ಕಲಬುರಗಿ ವಿಭಾಗದಿಂದ 6)

**ಚುನಾವಣೆಯಲ್ಲಿ ಸ್ಪರ್ಧಿಸಬಯಸುವ ಸಹಕಾರಿ ಸಂಸ್ಥೆಗಳು ಈ ಅರ್ಹತೆಯನ್ನು ಹೊಂದಿರತಕ್ಕದ್ದು.**

- ಸಹಕಾರಿಯು ನೋಂದಣಿಯಾಗಿ ಕನಿಷ್ಠ 2 ವರ್ಷಗಳಾಗಿರಬೇಕು.
- ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಕಲಂ55ರ ರಿತ್ಯಾ ಅರ್ಹ ಮತದಾರನಾಗಿರಬೇಕು.
- ಸಂಯುಕ್ತ ಸಹಕಾರಿಯ ಕಳೆದ 3 ವರ್ಷದ ವಾರ್ಷಿಕ ಮಹಾ ಸಭೆಯಲ್ಲಿ ನಿರಂತರವಾಗಿ ಅನಧಿಕೃತವಾಗಿ ಗೈರು ಹಾಜರಾಗಿರಕೊಡದು.

## ಯುವಕರು ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮ

### ಯುವಕರು ಸಹಕಾರ ಕ್ಷೇತ್ರದ ಮೂಲಕ ಆರ್ಥಿಕ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವುದು ಅವಶ್ಯಕ - ಪ್ರೋ. ಜೋಗನ ಶಂಕರ



**ಶಿವಮೊಗ್ಗ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ : 19.10.2016ರಂದು ಶ್ರೀ ಎಸ್.ಪಿ.ಹಿರೇಮಠ ಸಭಾಂಗಣದಲ್ಲಿ ಏರ್ಪಡಿಸಿದ್ದ "ಯುವಕರು ಹಾಗೂ ಸಹಕಾರ ಸಂವಾದ ಕಾರ್ಯಕ್ರಮ"ವನ್ನು ಉದ್ಘಾಟಿಸಿ, ಮಾತನಾಡಿದ ಕುಲಪತಿ ಪ್ರೋ. ಜೋಗನ ಶಂಕರರವರು ಇದೊಂದು ಅತ್ಯುತ್ತಮವಾದ ಕಾರ್ಯಕ್ರಮ.

ಸಹಕಾರ ಕ್ಷೇತ್ರ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸೇವೆ ಸಲ್ಲಿಸಲು ಅವಕಾಶವಿರುವ ಕ್ಷೇತ್ರ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ತರವಾದ ಭೂಮಿಕೆಯನ್ನು ನಿರ್ವಹಿಸುತ್ತಿದೆ. ಇಂತಹ ಸಹಕಾರ ಕ್ಷೇತ್ರದಲ್ಲಿ ಯುವಕರು ಪಾಲ್ಗೊಳ್ಳುವುದು ಅತ್ಯಂತ ಅವಶ್ಯಕ. ಈ ಕಾರ್ಯಕ್ರಮವನ್ನು ಏರ್ಪಡಿಸುತ್ತಿರುವ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯನ್ನು ನಾನು ಅಭಿನಂದಿಸುತ್ತೇನೆ ಎಂದು ತಿಳಿಸುತ್ತಾ ಸಹಕಾರ ಕ್ಷೇತ್ರದ ಮೂಲಕ ಯುವಕರು ಸಾಕಷ್ಟು ಪ್ರಯೋಜನ ಪಡೆಯಬಹುದಾಗಿದೆ ಎಂದು ತಿಳಿಸಿದರು.

### ಸಹಕಾರ ಕ್ಷೇತ್ರಕ್ಕೆ ನವಚೈತನ್ಯ ತುಂಬುವ ಶಕ್ತಿ ಯುವಕರಲ್ಲಿದೆ - ಶ್ರೀ ಗುರುನಾಥ ಜಾಂತಿಕರ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಷ್ಟ್ರದ ಹಾಗೂ ರಾಜ್ಯದ ಸಹಕಾರ ಕ್ಷೇತ್ರದ ಪ್ರಗತಿ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯನ್ನು ವಿವರಿಸಿ ಮಾತನಾಡುತ್ತಾ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭವಾಗಿ ಕೇವಲ 16 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ರಾಜ್ಯದ 110 ವರ್ಷಗಳ ಇತಿಹಾಸವನ್ನು ಹೊಂದಿರುವ ಸಹಕಾರ ಕ್ಷೇತ್ರದ ಪ್ರಗತಿಯನ್ನು ಸರಿಗಟ್ಟಿಸುವಷ್ಟು ಸಾಧನೆಯನ್ನು ಈ ಸೌಹಾರ್ದ ಸಹಕಾರಿ ಕ್ಷೇತ್ರ ಸಾಧಿಸಿದೆ. ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಯುವಕರು ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳುತ್ತಿರುವುದು ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ವೇಗವಾಗಿ ಬೆಳೆಯುತ್ತಿದೆ.

3800ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಮೂಲಕ 50,000ಕ್ಕೂ ಹೆಚ್ಚು ಯುವಕರಿಗೆ ಉದ್ಯೋಗವನ್ನು ನೀಡಲಾಗಿದೆ. ಇ-ಸ್ಟ್ಯಾಂಪಿಂಗ್‌ನಂತಹ ಅನೇಕ ವಿಧವಾದ ವಿಶಿಷ್ಟ ಸೇವೆಗಳನ್ನು ಒದಗಿಸುವ ಮೂಲಕ ಸಾರ್ವಜನಿಕರ, ಸರಕಾರದ ಹಾಗೂ ಸಹಕಾರಿಗಳ ಗಮನವನ್ನು ಸೆಳೆದಿದೆ. ಸಹಕಾರ ಕ್ಷೇತ್ರದಲ್ಲಿ ಆಡಳಿತ ಚುಕ್ಕಾಣಿಯನ್ನು ಪಾರಂಪಾರಿಕವಾಗಿ ಪಟ್ಟಭದ್ರ ಹಿತಾಸಕ್ತಿಗಳಿಂದಲೇ ನಡೆಯುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಯುವಜನರು ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳುವುದು ಅವಶ್ಯಕ ಎಂದು ತಿಳಿಸಿದರು. ಸಹಕಾರ ಕ್ಷೇತ್ರದ ಮೂಲಕ ಯುವಕರು ಉದ್ಯೋಗ ಪಡೆಯಲು ಸಾಧ್ಯವಾಗುವುದರ ಜೊತೆಗೆ ಅವರ ವ್ಯಕ್ತಿತ್ವ ವಿಕಸನಗೊಳಿಸಲು ಹಾಗೂ ನಾಯಕತ್ವವನ್ನು ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

## ವಿಶ್ವ ಸಹಕಾರ ಕ್ಷೇತ್ರದಲ್ಲಿ ಭಾರತದ ಸಹಕಾರ ಕ್ಷೇತ್ರದ ಸಾಧನೆ ಗಮನಾರ್ಹ – ಶ್ರೀ ಎಸ್.ಆರ್.ಸತೀಶ್‌ಚಂದ್ರ

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರು ಹಾಗೂ ನಿರ್ದೇಶಕರಾದ ಮತ್ತು ಪ್ರಸ್ತುತ ಕ್ಯಾಂಪ್ಕೋ ಸಹಕಾರಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ ಚಂದ್ರರವರು ಮಾತನಾಡಿ, ದೇಶದ ಸಹಕಾರ ಕ್ಷೇತ್ರದ ಸಾಧನೆ ವಿಶ್ವದಲ್ಲಿ ಅತ್ಯಂತ ದೊಡ್ಡದಾಗಿದೆ. ಇಫ್ಕೋ, ಕಿಫ್ಕೋ, ಕ್ಯಾಂಪ್ಕೋ, ಮಾರ್ಮ್ಕೋ ಹಾಗೂ ಅನೇಕ ವಿಧವಾದ ಸಹಕಾರಿ ಸಂಸ್ಥೆಗಳಿಂದ ಈ ದೇಶದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ಈ ದೇಶದಲ್ಲಿ ಹಸಿರುಕ್ರಾಂತಿ, ಶ್ವೇತ ಕ್ರಾಂತಿಗೆ ಈ ಕ್ಷೇತ್ರ ಕಾರಣವಾಗಿದೆ. ಈಗ ಜ್ಞಾನ ಕ್ರಾಂತಿಯಾಗುತ್ತಿದೆ. ಇವೆಲ್ಲವುಗಳಲ್ಲಿ ಯುವಕರು ಸಕ್ರಿಯವಾಗಿ ಭಾಗವಹಿಸುವುದು ಅವಶ್ಯಕ. ಅದಕ್ಕಾಗಿಯೇ ಸಂಯುಕ್ತ ಸಹಕಾರಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಇಂತಹ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ವಿಶ್ವವಿದ್ಯಾಲಯಗಳು ಸಹ ಆಸಕ್ತಿಯಿಂದ ಇಂತಹ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಡುತ್ತಿವೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಕುಮಾರಿ ಪ್ರಜ್ಞಾರವರಿಂದ ಪ್ರಾರ್ಥನೆಯಾದ ನಂತರ ಕುವೆಂಪು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಎನ್. ಯೋಗೀಶರವರು ಅತಿಥಿ ಗಣ್ಯರನ್ನು ಹಾಗೂ ಸಹಕಾರಿಗಳನ್ನು ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಸ್ವಾಗತಿಸಿ, ಅತಿಥಿ ಗಣ್ಯರನ್ನು ಪರಿಚಯಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರವಿಕುಮಾರ್, ಶಿವಮೊಗ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಶ್ವತ್ಥ ಹಾಗೂ ಮ್ಯಾಮ್ಕೋ ಅಧ್ಯಕ್ಷರಾದ ಶ್ರೀ ಯಡಗೆರೆ ಸುಬ್ರಮಣ್ಯರವರು ಉಪಸ್ಥಿತರಿದ್ದರು. ವಿಶ್ವವಿದ್ಯಾಲಯದ 200ಕ್ಕೂ ಹೆಚ್ಚು ವಿದ್ಯಾರ್ಥಿ–ವಿದ್ಯಾರ್ಥಿನಿಯರು, ವಿವಿಧ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕೊನೆಯಲ್ಲಿ ಪ್ರೋ. ಕದಂರವರು ವಂದನೆ ಸಲ್ಲಿಸಿದರು.

## ಈ ದೇಶದ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರ ನಿರ್ವಹಿಸುತ್ತಾ ಬಂದಿದೆ; ಯುವಕರಿಗೆ ಹೆಚ್ಚಿನ ಅವಕಾಶಗಳಿವೆ – ಡಾ. ಸಿದ್ಧಾಂತಿ

ಎರಡನೇ ಅವಧಿಯಲ್ಲಿ ಡಾ. ಸಿದ್ಧಾಂತಿಯವರು "ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು ಹಾಗೂ ಯುವಕರ ಪಾತ್ರ" ಎಂಬ ವಿಷಯವನ್ನು ಮಂಡಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಡಾ. ಟಿ.ಆರ್.ಮಂಜುನಾಥರವರು ವಹಿಸಿದ್ದರು. ಡಾ. ಸಿದ್ಧಾಂತಿಯವರು ವಿಶ್ವದ ವಿವಿಧ ದೇಶಗಳಲ್ಲಿ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಹಾಗೂ ಭಾರತದಲ್ಲಿ ಸಹಕಾರ ಕ್ಷೇತ್ರ ಬೆಳೆದು ಬಂದ ದಾರಿಯ ಬಗ್ಗೆ ಸಹಕಾರ ಕ್ಷೇತ್ರದಲ್ಲಿ ಯುವಕರಿಗೆ ಇರುವ ಅವಕಾಶಗಳ ಬಗ್ಗೆ ವಿವರವಾಗಿ ಉಪನ್ಯಾಸದ ಮೂಲಕ ವಿಷಯ ಮಂಡನೆ ಮಾಡಿದರು

## ಸಹಕಾರ ಕ್ಷೇತ್ರದ ವಿರಾಟ ಸ್ವರೂಪ ದರ್ಶನ – ಡಾ. ಟಿ.ಆರ್.ಮಂಜುನಾಥ

ಕುವೆಂಪು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಟಿ.ಆರ್.ಮಂಜುನಾಥರವರು ಮಾತನಾಡಿ ಇದೊಂದು ಅತ್ಯಂತ ಮಹತ್ವದ ಕಾರ್ಯಕ್ರಮ.

ವಿಶೇಷವಾಗಿ ಯುವಕರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕೆ ಬೇಕಾಗಿರುವ ಮಹತ್ವದ ವಿಷಯಗಳ ಪ್ರಸ್ತಾವನೆಯಾಗಿದೆ. ಸಾಹಿತ್ಯಗಳನ್ನು ಒದಗಿಸಿದ್ದಾರೆ. ಈ ಕ್ಷೇತ್ರದ ವಿರಾಟ ಸ್ವರೂಪ ದರ್ಶನವನ್ನೇ ಮಾಡಿಸುವ ಪ್ರಯತ್ನ ಇದಾಗಿದೆ ಎಂದು ತಿಳಿಸಿ, ಸೌಹಾರ್ದ ಸಂಯುಕ್ತ ಸಹಕಾರಿಗೆ ತಮ್ಮ ಕೃತಜ್ಞತೆಯನ್ನು ತಿಳಿಸಿದರು.

## ಸಂವಾದ ಕಾರ್ಯಕ್ರಮ

ನಂತರ ನಡೆದ ಸಂವಾದ ಕಾರ್ಯಕ್ರಮವನ್ನು ಶ್ರೀ ಪಿ.ರುದ್ರಪ್ಪ, ಸಲಹೆಗಾರರು, ಸಹಕಾರ ವಾರ ಪತ್ರಿಕೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಇವರು ನಡೆಸಿಕೊಟ್ಟರು. ಸಂಪನ್ಮೂಲ ವ್ಯಕ್ತಿಗಳಾಗಿ ಕುವೆಂಪು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಟಿ.ಆರ್.ಮಂಜುನಾಥ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಪ್ರಾಧ್ಯಾಪಕರಾದ ಡಾ. ಎಸ್.ಎನ್.ಯೋಗೀಶ, ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಸಿ.ರಾಜಣ್ಣರೆಡ್ಡಿ, ಶಿವಮೊಗ್ಗ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ. ಸ್ವಾಮಿ, ಶಿವಮೊಗ್ಗದ ಸಹಕಾರಿಗಳ ಉಪನಿಬಂಧಕರಾದ ಶ್ರೀ ಎ.ಎಸ್.ಜಯಪ್ಪ, ಶಿವಮೊಗ್ಗದ ಸಹಕಾರ ಲೆಕ್ಕಪರಿಶೋಧನಾ ಉಪನಿರ್ದೇಶಕರಾದ ಶ್ರೀ ಎಮ್.ಹೆಚ್.ಲಕ್ಷ್ಮಣ, ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರರಾದ ಶ್ರೀ ರಾಮಚಂದ್ರ ಗುಣಾರಿ ಇವರು ಉಪಸ್ಥಿತರಿದ್ದು, ವಿದ್ಯಾರ್ಥಿ–ವಿದ್ಯಾರ್ಥಿನಿಯರ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ವಹಿಸಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸಂವಾದದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ಅನೇಕ ಪ್ರಶ್ನೆಗಳನ್ನು ಕೇಳುವುದರ ಮೂಲಕ ಸಂವಾದವನ್ನು ಅರ್ಥಪೂರ್ಣವನ್ನಾಗಿಸಿದರು.





## ಸಮಾರೋಪ ಕಾರ್ಯಕ್ರಮ : ಆರ್ಥಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ಉತ್ತಮ ಆಯ್ಕೆ – ಪ್ರೊ. ಜೆ.ಸೋಮಶೇಖರ

ನಂತರ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೋ. ಜೆ.ಸೋಮಶೇಖರರವರು ಮಾತನಾಡಿ, ಈ ದೇಶದಲ್ಲಿ ಸಹಕಾರ ಕ್ಷೇತ್ರದ ಸಾಧನೆಗಳನ್ನು ಗಮನಿಸಿದಾಗ ಸಹಕಾರ ಕ್ಷೇತ್ರ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಈ ದೇಶದಲ್ಲಿ ಸಹಕಾರಿ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿವೆ. ಸಾಮಾಜಿಕ ಅಭಿವೃದ್ಧಿಯೂ ಸಹ ಆಗುತ್ತಿದೆ. ಈ ಎಲ್ಲಾ ವಿಷಯಗಳ ಬಗ್ಗೆ ಇಂದಿನ ಸಂವಾದ ಕಾರ್ಯಕ್ರಮ ಹಾಗೂ ಇಲ್ಲಿ ಭಾಗವಹಿಸಿದ್ದ ಅನೇಕ ಗಣ್ಯರು ಹಾಗೂ ಸಹಕಾರಿ ಅಧಿಕಾರಿಗಳು ತಮ್ಮ ಅನುಭವವನ್ನು ನಿಮ್ಮ ಜೊತೆಗೆ ಹಂಚಿಕೊಂಡಿರುವುದು ಅತ್ಯಂತ ಉತ್ತಮವಾದ ಕಾರ್ಯ ಎಂದು ನಾನು ಭಾವಿಸಿ, ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಸಂಯುಕ್ತ ಸಹಕಾರಿಯನ್ನು ಅಭಿನಂದಿಸಿದರು ಹಾಗೂ ಯುವಜನರು ತಾವು ಯಾವುದೇ ವೃತ್ತಿಯನ್ನು ಆಯ್ಕೆ ಮಾಡಿಕೊಂಡರೂ ನಿಜ ಜೀವನದಲ್ಲೂ ಸಹಕಾರ ಕ್ಷೇತ್ರದ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತದೆ. ಈ ಕ್ಷೇತ್ರದ ಬಗ್ಗೆ ಮಾಹಿತಿ ಇರುವುದು ಅವಶ್ಯಕ. ಆದ್ದರಿಂದ, ಈ ಕಾರ್ಯಕ್ರಮ ಹೆಚ್ಚಿನ ಪ್ರಯೋಜನಕಾರಿಯಾಗಿದೆ ಎಂದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಅಧ್ಯಕ್ಷ ಭಾಷಣವನ್ನು ಮಾಡಿ, ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳಿಗೆ, ಶಿವಮೊಗ್ಗ ಜಿಲ್ಲೆಯ ಎಲ್ಲಾ ಸಹಕಾರಿ ಸಂಸ್ಥೆಗಳಿಗೆ ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.



### ಕುಲಪತಿ ಹಾಗೂ ಕುಲಸಚಿವರಿಗೆ ಸನ್ಮಾನ

ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪರವಾಗಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೋ. ಜೋಗನ ಶಂಕರ, ಕುಲಸಚಿವರಾದ ಪ್ರೋ. ಜೆ.ಸೋಮಶೇಖರ ಹಾಗೂ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ. ಎಸ್. ಎನ್.ಯೋಗೀಶರವರುಗಳನ್ನು ಗೌರವಿಸಲಾಯಿತು.



## ಕಲಬುರಗಿ ವಿಭಾಗ : ವಿಷಯಾಧಾರಿತ ತರಬೇತಿ



**ಹೊಸಪೇಟೆ :** ದಿನಾಂಕ : 01.10.2016ರಂದು ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ವಿಷಯಾಧಾರಿತ ತರಬೇತಿ"ಯನ್ನು ಬಿಲ್ವ ರೆಸಿಡೆನ್ಸಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಇವರು ಉದ್ಘಾಟಿಸಿದರು. ಶ್ರೀ ಆನಂದ.ಎಲ್.ಎಸ್, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ತರಬೇತಿಯಲ್ಲಿ ಬಳ್ಳಾರಿ ಜಿಲ್ಲೆಯ 61 ಸೌಹಾರ್ದ ಸಹಕಾರಿಗಳಿಂದ 95 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನವನ್ನು ಪಡೆದುಕೊಂಡರು.



**ಕಲಬುರಗಿ :** ದಿನಾಂಕ 03.10.2016ರಂದು ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹೆಚ್.ಕೆ.ಸಿ.ಸಿ ಸಭಾಂಗಣ, ಕಲಬುರಗಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶ್ರೀ ವೈ.ಟಿ.ಪಾಟೀಲ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಉದ್ಘಾಟಿಸಿ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ತರಬೇತಿಯಲ್ಲಿ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ 58 ಸೌಹಾರ್ದ ಸಹಕಾರಿಗಳಿಂದ 78 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನವನ್ನು ಪಡೆದುಕೊಂಡರು.

**ಸಿಂಧನೂರು :** ದಿನಾಂಕ 04.10.2016ರಂದು ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿನಯ್ ರೆಸಿಡೆನ್ಸಿ, ಸಿಂಧನೂರು, ರಾಯಚೂರು ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಇವರು ಉದ್ಘಾಟಿಸಿದರು. ಶ್ರೀಮತಿ ಮಂಜುಳಾ ಪಾಟೀಲ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ತರಬೇತಿಯಲ್ಲಿ ರಾಯಚೂರು ಜಿಲ್ಲೆಯ 89 ಸೌಹಾರ್ದ ಸಹಕಾರಿಗಳಿಂದ 117 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನವನ್ನು ಪಡೆದುಕೊಂಡರು.



**ಬೀದರ್ :** ದಿನಾಂಕ : 07.10.2016ರಂದು ಬೀದರ್ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ವಿಷಯಾಧಾರಿತ ತರಬೇತಿ"ಯನ್ನು ಶಾರದಾ ರೂಡ್‌ಶೆಡ್, ಬೀದರ್ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಇವರು ಉದ್ಘಾಟಿಸಿದರು. ಶ್ರೀ ಶಿವಾನಂದ ಮಂಠಾಳ್‌ಕರ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ತರಬೇತಿಯಲ್ಲಿ ಬೀದರ್ ಜಿಲ್ಲೆಯ 46 ಸೌಹಾರ್ದ ಸಹಕಾರಿಗಳಿಂದ 75 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನವನ್ನು ಪಡೆದುಕೊಂಡರು.



## ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಸಿಬ್ಬಂದಿಯವರಿಂದ ಅಭಿನಂದನಾ ಸಭೆ

ಬೆಂಗಳೂರು : ದಿನಾಂಕ : 20.10.2016 ರಂದು ನಡೆದ ಆಡಳಿತ ಮಂಡಲಿ ಸಭೆಯ ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದಲ್ಲಿ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು 2011-16ರವರೆಗಿನ ಅವಧಿಯಲ್ಲಿ ಈ ಆಡಳಿತ ಮಂಡಲಿಯು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸಿರುವುದನ್ನು ಸ್ಮರಿಸಿ ಅಭಿನಂದಿಸಲಾಯಿತು.

ಎಲ್ಲ ಸಿಬ್ಬಂದಿಯವರ ಪರವಾಗಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ ಈ ಅವಧಿಯಲ್ಲಿ ಸಂಯುಕ್ತ ಸಹಕಾರಿಯಿಂದ ಅನೇಕ ಮಹತ್ವದ ಕೆಲಸಕಾರ್ಯಗಳು ನಡೆದಿವೆ. ಎಲ್ಲಾ ಕೆಲಸ ಕಾರ್ಯಗಳಿಗೆ ಅಧ್ಯಕ್ಷರಾದಿಯಾಗಿ ಎಲ್ಲಾ ನಿರ್ದೇಶಕರು ಸಂಪೂರ್ಣ ಸಹಕಾರ ನೀಡಿದ್ದಾರೆ ಸೌಹಾರ್ದ ಸಂಯುಕ್ತ ಸಹಕಾರಿಯನ್ನು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಲು ಸಹಕಾರಿಯಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರವೂ ವೇಗವಾಗಿ ಬೆಳೆಯಲು ಸಹಕಾರಿಯಾಗಿದೆ ಎಂದರು.

ನಂತರ ಎಲ್ಲಾ ನಿರ್ದೇಶಕರು, ಉಪಾಧ್ಯಕ್ಷರು ಹಾಗೂ ಅಧ್ಯಕ್ಷರಿಗೆ ಎಲ್ಲಾ ಸಿಬ್ಬಂದಿಯವರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯನ್ನು ಉತ್ತಮವಾಗಿ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯವರನ್ನು ಆಡಳಿತ ಮಂಡಲಿಯವರು ಪ್ರಶಂಸಿಸಿದರು, ತಮ್ಮೆಲ್ಲರನ್ನು ಅಭಿನಂದಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಿದರು.

## ಪ್ರಕಟಣೆ

### ಸೌಹಾರ್ದ ಸಹಕಾರಿಗಳ ಸಾಮಾನ್ಯ ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು

ಅಧಿಕಾರಾವಧಿ ಅಂತ್ಯಗೊಳ್ಳಲಿರುವ ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯ ವ್ಯಾಪ್ತಿ ಹೊಂದಿರುವ ಎಲ್ಲಾ ರೀತಿ ಪ್ರಾಥಮಿಕ ಸೌಹಾರ್ದ ಸಹಕಾರಿಗಳ ಸಾಮಾನ್ಯ ಚುನಾವಣೆಗೆ ಸಂಬಂಧಿಸಿದಂತೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗುವ ಕನಿಷ್ಠ 120 ದಿನಗಳ ಪೂರ್ವದಲ್ಲಿ ಸೌಹಾರ್ದ ಸಹಕಾರಿಗಳು ರಿಟರ್ನಿಂಗ್ ಅಧಿಕಾರಿ ನೇಮಕಾತಿಗಾಗಿ ಚುನಾವಣಾ ಪ್ರಸ್ತಾವನೆಯನ್ನು ತಮ್ಮ ವ್ಯಾಪ್ತಿಯ ಸಹಕಾರಿಯ ನಿಬಂಧಕರಿಗೆ, ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು

**ವಿಶೇಷಾಧಿಕಾರಿಗಳ ನೇಮಕ :** ಸಾಯಿರುಕ್ಮಿಣಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಉಡುಪಿ ಸಹಕಾರಿಯ 09 ನಿರ್ದೇಶಕರುಗಳು ಕನಿಷ್ಠ ವ್ಯವಹಾರ ಮಾಡಿಲ್ಲದಿರುವುದರಿಂದ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ಅನರ್ಹಗೊಂಡಿರುವುದರಿಂದ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆಕ್ಕಿಂತ ಕಡಿಮೆಯಿರುವ ಹಿನ್ನೆಲೆಯಲ್ಲಿ ಶ್ರೀ ರಾಜೇಶ್.ಕೆ.ಎಂ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ವಿಭಾಗ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

## ವೀರ ರಾಣಿ ಅಬ್ಬಕ್ಕ



ರಾಣಿ ಅಬ್ಬಕ್ಕ 16ನೇ ಶತಮಾನದ ದ್ವಿತೀಯಾರ್ಧದಲ್ಲಿ ಕರ್ನಾಟಕದ ಕರಾವಳಿ ಭಾಗದ ಉಳ್ಳಾಲವನ್ನು ರಾಜಧಾನಿಯಾಗಿಸಿಕೊಂಡು ಆಳಿದ ರಾಣಿ. ಅಳಿಯ ಸಂತಾನವನ್ನು ಅನುಸರಿಸುವ ಚೌಟ ವಂಶಕ್ಕೆ ಸೇರಿದ ರಾಣಿ ಅಬ್ಬಕ್ಕನ್ನು ಮಾವ ತಿರುಮಲರಾಯನು ಪಟ್ಟಕಟ್ಟಿ ರಾಣಿಯನ್ನಾಗಿಸಿ, ಮಂಗಳೂರಿನ ಅರಸನಾಗಿದ್ದ ಲಕ್ಷ್ಮಪ್ಪ ಅರಸನೊಂದಿಗೆ ವಿವಾಹ ನೆರವೇರಿಸಿದನು.

ದೇವಾಲಯಗಳ ನಗರ ಮೂಡುಬಿದಿರೆಯ ಆಯಕಟ್ಟಿನ ಪ್ರದೇಶವಾದ ಉಳ್ಳಾಲವನ್ನು ವಶಪಡಿಸಿಕೊಳ್ಳಲು ಪೋರ್ಚುಗೀಸರು ಅನೇಕ ಪ್ರಯತ್ನಗಳನ್ನು ನಡೆಸಿದರು. ಆದರೆ ರಾಣಿಯು ಅವರ ಪ್ರಯತ್ನವನ್ನು ನಾಲ್ಕು ದಶಕಗಳ ಕಾಲ ಹಿಮ್ಮೆಟ್ಟಿಸಿದಳು. ಅವಳ ಧೈರ್ಯದಿಂದಾಗಿ ಅಭಯ ರಾಣಿ ಎಂದು ಹೆಸರಾಗಿದ್ದಳು. ಹೊರ ರಾಷ್ಟ್ರಗಳಿಗೆ ಕರಿಮೆಣಸನ್ನು ರಫ್ತು ಮಾಡುತ್ತಿದ್ದ ಕಾರಣಕ್ಕೆ ಮೆಣಸಿನ ರಾಣಿ ಎಂದು ಹೆಸರಾಗಿದ್ದಳು. ವಿದೇಶಿ ಆಕ್ರಮಣಕಾರರ ವಿರುದ್ಧ ಹೋರಾಡಿದ ಮೊದಲ ಭಾರತೀಯರಲ್ಲಿ ಒಬ್ಬಳು ಮತ್ತು ಮೊದಲ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ಎಂದು ಭಾರತದ ಚರಿತ್ರೆಯಲ್ಲಿ ಈಕೆ ದಾಖಲಾಗಿದ್ದಾಳೆ. ಈಕೆಯ ನೆನಪಿನ ಗೌರವಾರ್ಥ ಭಾರತ ಸರಕಾರವು 2003ರ ಜನವರಿ 15ರಂದು ರಾಣಿ ಅಬ್ಬಕ್ಕನ ಚಿತ್ರವುಳ್ಳ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದೆ.

### ಮುಂಬರುವ ಕಾರ್ಯಕ್ರಮಗಳು

## ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 16ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳಲಾಗುತ್ತಿರುವ ವ್ಯಕ್ತಿತ್ವ ವಿಕಸ ತರಬೇತಿ ಶಿಬಿರದ 16ನೇ ತಂಡದ ತರಬೇತಿಯನ್ನು ಬೆಂಗಳೂರಿನ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ದಿನಾಂಕ 15 ಡಿಸೆಂಬರ್ 2016 ರಿಂದ 24 ಡಿಸೆಂಬರ್ 2016ರವರೆಗೆ ಹಮ್ಮಿಕೊಳ್ಳಲಾಗಿದೆ.

ತರಬೇತಿಗೆ ಪ್ರವೇಶ 50 ಜನರಿಗೆ ಮಾತ್ರ. ವಸತಿ ಹಾಗೂ ಊಟೋಪಚಾರ ಹಾಗೂ ತರಬೇತಿ ಅವಧಿಯ ಪ್ರವಾಸದ ವೆಚ್ಚ ನಿರ್ವಹಣೆಗಾಗಿ ಪ್ರತಿನಿಧಿ ಶುಲ್ಕ ರೂ.5000/- ಪಾವತಿಸಬೇಕಾಗುತ್ತದೆ. ತರಬೇತಿ ವ್ಯವಸ್ಥೆ ಹಾಗೂ ಅಧ್ಯಯನ ಸಾಹಿತ್ಯಗಳನ್ನು ಸಂಯುಕ್ತ ಸಹಕಾರಿಯು ನಿರ್ವಹಿಸುತ್ತದೆ. ಮಹಿಳೆಯರಿಗಾಗಿ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಪ್ರತಿನಿಧಿಗಳು ತರಬೇತಿ ಸ್ಥಳಕ್ಕೆ ಬಂದು ಹೋಗುವ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ಆಯಾ ಸೌಹಾರ್ದ ಸಹಕಾರಿಗಳು ಭರಿಸಬೇಕಾಗುತ್ತದೆ.

**ಕಾರ್ಯಕ್ರಮದ ವಿವರಗಳು :** ತರಬೇತಿಯ ಅವಧಿಯಲ್ಲಿ ಸಹಕಾರ ಕ್ಷೇತ್ರ, ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು, ಕಛೇರಿ ಆಡಳಿತ ನಿರ್ವಹಣೆ, ಲೆಕ್ಕಪತ್ರಗಳ ನಿರ್ವಹಣೆ, ಹಣಕಾಸಿನ ನಿರ್ವಹಣೆ, ಸಾಲಪತ್ರಗಳ ನಿರ್ವಹಣೆ, ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಿಷಯಗಳು, ಆಂತರಿಕ ಸಂಬಂಧ ಹಾಗೂ ಗ್ರಾಹಕರ ಸೇವೆಗಳ ನಿರ್ವಹಣೆ, ಮಾನವೀಯ ಮೌಲ್ಯಗಳು ಮುಂತಾದ ವಿಷಯಗಳ ಬಗ್ಗೆ ತಿಳಿಸಿಕೊಡಲಾಗುವುದು.

ಆರ್ಥಿಕ ತಃಖ್ತೆಗಳ ಸಿದ್ಧತೆ, ಸಭೆಯ ನೋಟೀಸ್, ಟಿಪ್ಪಣಿ ಹಾಗೂ ನಡವಳಿಗಳನ್ನು ಬರೆಯುವ ಬಗ್ಗೆ ಪ್ರಾಯೋಗಿಕ ನಡೆಸಿಕೊಡಲಾಗುತ್ತದೆ. ಅತ್ಯುತ್ತಮ ಸಹಕಾರ ಸಂಸ್ಥೆಗಳಿಗೆ ಅಧ್ಯಯನ ಪ್ರವಾಸ ಹಾಗೂ ಪ್ರೇಕ್ಷಣೀಯ ಸ್ಥಳಗಳ ಭೇಟಿಯನ್ನು ಆಯೋಜಿಸಲಾಗುತ್ತದೆ. ಬೆಳಿಗ್ಗೆ ಯೋಗಾಭ್ಯಾಸ, ಸಂಜೆ ಅನೌಪಚಾರಿಕ ಸಭೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತದೆ. ಹೆಸರನ್ನು ನೋಂದಾಯಿಸಲು ಕಡೆಯ ದಿನಾಂಕ 30.11.2016. ಹೆಚ್ಚಿನ ಮಾಹಿತಿಗಾಗಿ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ತರಬೇತಿ ವಿಭಾಗದ ಅಧಿಕಾರಿಗಳನ್ನು ಹಾಗೂ ವಿಭಾಗೀಯ ಕಛೇರಿಯ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಿದೆ.

## ದಾವಾ ಪಂಚಾಯಿತಿ ನ್ಯಾಯಾಲಯದ ಸಮಾಚಾರ

**ದಾವಾ ದಾಖಲಾತಿ ವಿಭಾಗದ ಅಧಿಕಾರಿಗಳು :** ಅಧಿಕ ಪ್ರಭಾರ ನ್ಯಾಯಾಧೀಶರಾಗಿ ಜಂಟಿ ನಿಬಂಧಕರಾದ ಶ್ರೀ ಕೆ.ಎಲ್. ನರಸಿಂಹಮೂರ್ತಿಯವರು ಕಾರ್ಯ ನಿರ್ವಹಿಸುತ್ತಿದ್ದು, ಪೂರ್ಣಾವಧಿ ಪೀಠಾಧಿಕಾರಿಯಾಗಿ ಶ್ರೀಮತಿ ಕೆ.ಎಂ.ಆಶಾ, ಜಂಟಿ ನಿಬಂಧಕರು ನೇಮಕವಾಗಿದ್ದಾರೆ.

ಬೆಳಗಾವಿ ವಿಭಾಗದ ಜಿಲ್ಲೆಗಳು – ಶ್ರೀ ರಾಚಯ್ಯ ಸಿ. ಹಿರೇಮಠ, ಮೊಬೈಲ್ ಸಂಖ್ಯೆ : 8884460278. ಕಲಬುರಗಿ, ಬೆಂಗಳೂರು ಹಾಗೂ ಮೈಸೂರು ವಿಭಾಗದ ಜಿಲ್ಲೆಗಳು – ಶ್ರೀ ವಿನೋದ್ ಕುಮಾರ್ ತಗಾರೆ, ಮೊಬೈಲ್ ಸಂಖ್ಯೆ : 9449274481.

**ಅಮಲ್ಜಾರಿ ವಿಭಾಗದ ಅಧಿಕಾರಿಗಳು :** ಶ್ರೀ ಎಂ.ಪಿ. ಮಂಜುನಾಥ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೊಬೈಲ್ ಸಂಖ್ಯೆ : 9449442773, ಶ್ರೀ ಶಿವಕಾಂತ್, ಮೊಬೈಲ್ ಸಂಖ್ಯೆ : 8197258938, ಕುಮಾರಿ ಶೈಲಜಾ ಎಸ್, ಮೊಬೈಲ್ ಸಂಖ್ಯೆ : 9945254306.

ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಇದುವರೆಗೆ ಬೆಳಗಾವಿ ವಿಭಾಗದಿಂದ 617, ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 205 ಸೇರಿದಂತೆ ಒಟ್ಟು 822 ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 31 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಉಡುಪಿ ಬಸ್ ಮಾಲೀಕರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನೂತನ ಶಾಖೆಯ ಉದ್ಘಾಟನೆ

**ಉಡುಪಿ** : ಉಡುಪಿ ಬಸ್ ಮಾಲೀಕರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಎರಡನೇ ಶಾಖೆಯನ್ನು ಶಿರ್ವ ಮುಖ್ಯ ರಸ್ತೆಯ ವಿನೋದ್ ಟವರ್ಸ್‌ನಲ್ಲಿ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಕೇಂಜ ಶ್ರೀಧರ ತಂತ್ರಿಯವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಉದ್ಯಮಿ ಶ್ರೀ ಸುರೇಶ್ ಶೆಟ್ಟಿ ಗುರ್ಮೆ, ಜಿ.ಪಂ. ಸದಸ್ಯರಾದ ಶ್ರೀ ವಿಲ್ಸನ್ ರೋಡ್ರಿಗ್ರಸ್, ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಭಾಸ್ಕರ ಕಾಮತ್, ಹಿರಿಯ ಸಹಕಾರಿ ಮತ್ತು ಕಟ್ಟಡದ ಮಾಲೀಕರಾದ ಶ್ರೀ ಕೆ.ವಸಂತ್ ಕಾಮತ್, ಶಿರ್ವ ಬಸ್ ಮಾಲೀಕರ ಸಂಘದ ಗೌರವಾಧ್ಯಕ್ಷರಾದ ಸ್ಟಾನ್ಲಿ ಡಯಾಸ್, ಸಂಘದ ಉಪಾಧ್ಯಕ್ಷರಾದ ಶ್ರೀ ಸುಧಾಕರ ಕಲ್ಮಾಡಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಕುಯಿಲಾಡಿ ಸುರೇಶ್ ನಾಯಕ್‌ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು ಹಾಗೂ ಶ್ರೀ ವೈ. ಎಸ್.ರಾವ್, ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.





## ಶ್ರೀ ಗುರು ಕಣ್ವ ಪತ್ತಿನ ಸೌಹಾರ್ದ ಸಹಕಾರಿ ಕಛೇರಿ ಉದ್ಘಾಟನೆ

**ಕೊಪ್ಪಳ** : ಶ್ರೀ ಗುರು ಕಣ್ವ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ಕಛೇರಿ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಮತ್ತು ಶ್ರೀ ಸಂತ ಶ್ರೇಷ್ಠ ಕರ್ಕಿಹಳ್ಳಿ ಸುರೇಶಬಾಬು ಪಾಟೀಲ ಗುರುಗಳ ಅಮೃತ ಹಸ್ತದಿಂದ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕರು, ಸಿಬ್ಬಂದಿ ವರ್ಗ, ಸದಸ್ಯರು ಹಾಗೂ ಊರಿನ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

## ವೈದ್ಯಕೀಯ ತಪಾಸಣಾ ಶಿಬಿರ

**ಜೆಪ್ಪು** : ಮಂಗಳೂರು ಸೌಹಾರ್ದ ಸಹಕಾರಿ ನಿ., ಜಪ್ಪು ಸಹಕಾರಿಯ 7ನೇ ವರ್ಷಾಚರಣೆ ಪ್ರಯುಕ್ತ ಶಾಂತಿನಗರ ಸೇವಾ ಸಮಿತಿ, ಜಪ್ಪು ಹಾಗೂ ಎ.ಜೆ. ವೈದ್ಯಕೀಯ, ದಂತ ವೈದ್ಯಕೀಯ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ "ವೈದ್ಯಕೀಯ ತಪಾಸಣಾ ಶಿಬಿರ"ವನ್ನು ಶ್ರೀ ಐವನ್ ಡಿಸೋಜ, ವಿಧಾನ ಪರಿಷತ್ ಸದಸ್ಯರು ಇವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಭಾಸ್ಕರ ರಾವ್ (ಮಾಜಿ ಕಾರ್ಪೋರೇಟರ್) ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.



## ಮಹಿಳಾ ಸಮಾವೇಶ, ಕಾನೂನು ಸಲಹೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ

**ಸಂಡೂರು** : ಶ್ರೀ ಶಿವಲೀಲೆ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ವತಿಯಿಂದ ಮಹಿಳಾ ಸಮಾವೇಶ ಮತ್ತು ಕಾನೂನು ಸಲಹೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ದಿನಾಂಕ 01.10.2016ರಂದು ಮರಾಠ ಸಮಾಜ, ಸಂಡೂರು ಇಲ್ಲಿ ಮು.ನಿ.ಪ್ರ. ಪ್ರಭು ಮಹಾಸ್ವಾಮಿಗಳು, ವಿರಕ್ತಮಠ, ಸಂಡೂರು ಹಾಗೂ ಶ್ರೀ ಗಂಗಾಧರ ದೇವರು, ವಿರಕ್ತಮಠ, ಯಶವಂತನಗರ ಇವರ ದಿವ್ಯ ಸಾನಿಧ್ಯದಲ್ಲಿ ಶ್ರೀ ಬಿ.ನಾಗನಗೌಡರುರವರ ಅಧ್ಯಕ್ಷತೆಯಲ್ಲಿ ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಮತ್ತು ಶ್ರೀ ಎಲ್.ಎಸ್.ಆನಂದ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಉದ್ಘಾಟಿಸಿದರು.



## ಸಂವಾದ ಕಾರ್ಯಕ್ರಮ

**ಮೂಡುಬಿದಿರೆ :** ಶ್ರೀ ಸಿಂಚನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮೂಡಬಿದಿರೆಯ ಸಹಸಂಸ್ಥೆಯಾದ ಶ್ರೀ ಸಿಂಚನ ಸೇವಾ ಟ್ರಸ್ಟ್ (ರಿ), ಮೂಡುಬಿದಿರೆ ಇದರ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಸ್ವ–ಸಹಾಯ ಸೃಷ್ಟಿ–ದೃಷ್ಟಿ ಸಂವಾದ ಕಾರ್ಯಕ್ರಮವು ಮೂಡುಬಿದಿರೆಯ ಸಮಾಜ ಮಂದಿರದಲ್ಲಿ ನಡೆಯಿತು.

ಸಂವಾದ ಕಾರ್ಯಕ್ರಮವನ್ನು ಮಾಜಿ ಸಚಿವರು ಹಾಗೂ ಮೂಡುಬಿದಿರೆ ಶಾಸಕರಾದ ಶ್ರೀ ಕೆ.ಅಭಯಚಂದ್ರ ಜೈನ್‌ರವರು ಉದ್ಘಾಟಿಸಿದರು. ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಮೋಹನ್ ಪ್ರಭುರವರು ಅಧ್ಯಕ್ಷತೆ ವಹಿಸಿದ್ದರು. ಮೂಡುಬಿದಿರೆಯ ಉದ್ಯಮಿ ಶ್ರೀ ಕೆ. ಶ್ರೀಪತಿ ಭಟ್‌ರವರು ಮುಖ್ಯ ಅಥಿತಿಯಾಗಿದ್ದರು. ವೇದಿಕೆಯಲ್ಲಿ ಟ್ರಸ್ಟ್‌ನ ಟ್ರಸ್ಟಿ ಶ್ರೀ ಗೋಪಾಲಕೃಷ್ಣ ಹಾಗೂ ಶ್ರೀ ಸಿಂಚನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಜಿನರಾಜ್



ಶೆಟ್ಟಿಯವರು ಉಪಸ್ಥಿತರಿದ್ದರು. ಬಿ.ಸಿ. ರೋಡ್‌ನ ಯಕ್ಷಲೋಕ ಲೈಫ್ ಸ್ಕಿಲ್ ತರಬೇತಿ ಕೇಂದ್ರದ ನಿರ್ದೇಶಕರಾದ ಶ್ರೀ ಎ.ಗೋಪಾಲ ಅಂಚನ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

## ಮಾತೃಭೂಮಿ ಸೌಹಾರ್ದ ಸಹಕಾರಿಯಿಂದ ಸ್ವಚ್ಛ ಭಾರತ ಜಾಗೃತಿ ನಡಿಗೆ ಕಾರ್ಯಕ್ರಮ



**ಮೂಡುಬಿದಿರೆ :** ಮಾತೃಭೂಮಿ ಸೌಹಾರ್ದ ಸಹಕಾರಿಯ ವತಿಯಿಂದ ದಿನಾಂಕ 02.10.2016ರಂದು ಗಾಂಧಿಜಯಂತಿ ಪ್ರಯುಕ್ತ "ಸ್ವಚ್ಛ ಮೂಡಬಿದ್ರೆ ಶ್ರೇಷ್ಠ ಮೂಡಬಿದ್ರೆ" ಎನ್ನುವ ಪರಿಕಲ್ಪನೆಯಡಿ "ಸ್ವಚ್ಛ ಭಾರತ ಜಾಗೃತಿ ನಡಿಗೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮೂಡಬಿದ್ರೆ ಪುರಸಭೆಯ ಪೌರಕಾರ್ಮಿಕರನ್ನು (ಸ್ವಚ್ಛತಾ ಸೇನಾನಿಗಳನ್ನು) ಅಭಿನಂದಿಸಲಾಯಿತು. ಮಾಜಿ ಸಚಿವರು ಹಾಗೂ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ನಾಗರಾಜ ಶೆಟ್ಟಿರವರು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಸ್ವಚ್ಛ ಭಾರತ ಜಾಗೃತಿ ನಡಿಗೆಗೆ ಚಾಲನೆ ನೀಡಿದರು. ಮೂಡಬಿದ್ರಿ ಪ್ರದೇಶದ ಸಾವಿರ ಕಂಬದ ಬಸದಿಯಿಂದ ಬಸ್ ನಿಲ್ದಾಣದವರೆಗೆ ಸ್ವಚ್ಛತಾ ಕಾರ್ಯದ ಜತೆಗೆ ಸ್ವಚ್ಛತಾ ಪ್ರತಿಜ್ಞೆಯ ಕರಪತ್ರವನ್ನು ಎಲ್ಲಾ ಅಂಗಡಿ, ಕಛೇರಿಗಳಿಗೆ ವಿತರಿಸಲಾಯಿತು.

## ಉಚಿತ ವೈದ್ಯಕೀಯ ಶಿಬಿರ



**ಬೆಳ್ತಂಗಡಿ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಸಹಕಾರಿಯ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್, ಪುತ್ತೂರು ಇದರ ವತಿಯಿಂದ ರೋಟರಿ ಕ್ಲಬ್ ಬೆಳ್ತಂಗಡಿ, ನವೋದಯ ಯುವಕ ಮತ್ತು ಯುವತಿ ಮಂಡಲ ಮೇಲಂತಬೆಟ್ಟು, ಆತ್ಮೀಯ ಯುವಕ ಮಂಡಲ ಮೇಲಂತಬೆಟ್ಟು ಹಾಗೂ ಕೆ.ಎಂ.ಸಿ. ಆಸ್ಪತ್ರೆ, ಅತ್ತಾವರ, ಮಂಗಳೂರು ಇವರುಗಳ ಸಹಭಾಗಿತ್ವದಲ್ಲಿ ದಿನಾಂಕ 22 ಅಕ್ಟೋಬರ್ 2016ರಂದು ಹೋಲಿ ರೆಡೀಮರ್ ಶಾಲಾ ಆವರಣದಲ್ಲಿ ಬೃಹತ್ ಉಚಿತ ವೈದ್ಯಕೀಯ ಶಿಬಿರವನ್ನು ಆಯೋಜಿಸಲಾಗಿತ್ತು.

ಶಿಬಿರದಲ್ಲಿ 200ಕ್ಕೂ ಅಧಿಕ ಜನರು ತಪಾಸಣೆಯನ್ನು ಮಾಡಿಸಿಕೊಂಡರು, ಔಷಧ ವಿತರಣೆಯೊಂದಿಗೆ 100 ಮಂದಿಗೆ ಕನ್ನಡಕ ವಿತರಿಸಲಾಯಿತು. ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವವರಿಗೆ ಗ್ರೀನ್‌ಕಾರ್ಡ್ ನೀಡಲಾಯಿತು.

## ಶ್ರೀ ಶ್ರೀ ಸಾಯಿ ಸೌಹಾರ್ದ ಸಹಕಾರಿ ಉದ್ಘಾಟನೆ



ಶ್ರೀ ಶ್ರೀ ಸಾಯಿ ಸೌಹಾರ್ದ ಸಹಕಾರಿ ನಿ., ಹೊಸೂರ ಸಹಕಾರಿಯನ್ನು ಶ್ರೀ ಹೆಚ್.ಆರ್.ನಿರಾಣಿ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಆರ್. ಪಾಟೀಲ್ ಹಾಗೂ ಶಾಸಕರಾದ ಶ್ರೀ ಜೆ.ಟಿ.ಪಾಟೀಲರು ಉದ್ಘಾಟಿಸಿದರು.

# ರಜತ ಮಹೋತ್ಸವ ಕಾರ್ಯಕ್ರಮ

**ಕಲ್ಲೋಳಿ :** ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಸಹಕಾರಿಯ ರಜತ ಮಹೋತ್ಸವ ಕಾರ್ಯಕ್ರಮವನ್ನು 17.10.2016ರಂದು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ರಮೇಶ ಜಾರಕಿಹೋಳಿರವರು ಉದ್ಘಾಟಿಸಿದರು. ಶಾಸಕರಾದ ಶ್ರೀ ಬಾಲಚಂದ್ರ ಜಾರಕಿಹೊಳಿ ಅಧ್ಯಕ್ಷತೆ ವಹಿಸಿದ್ದರು. ಸಂಸದರಾದ ಶ್ರೀ ಸುರೇಶ್ ಅಂಗಡಿ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ನಿರ್ದೇಶಕರಾದ ಶ್ರೀ ರಾವಾಸಾಬ ಅಣ್ಣಾಸಾಬ ಪಾಟೀಲ, ಬಿಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ರಮೇಶ ಕತ್ತಿ ಹಾಗೂ ಉಪಾಧ್ಯಕ್ಷರಾದ ಶ್ರೀ ಸುಭಾಷ ಢವಳೇಶ್ವರ, ಪಟ್ಟಣ ಪಂಚಾಯ್ತಿ ಅಧ್ಯಕ್ಷರಾದ ಕಸ್ತೂರಿ ಕುರಬೇಟ, ಸಹಕಾರಿಗಳ ಉಪನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣಗೋಳ, ಸಹಾಯಕ ನಿಬಂಧಕರಾದ ಶ್ರೀ ಪಿ.ಪಿ.ಯಡಹಳ್ಳಿ ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳಪ್ಪಾ ಬೆಳಕೂಡ, ಉಪಾಧ್ಯಕ್ಷರಾದ ಶ್ರೀ ಶಿವರುದ್ರ ಬಿ. ಪಾಟೀಲ ಮತ್ತು ನಿರ್ದೇಶಕರು ಉಪಸ್ಥಿತರಿದ್ದರು.



ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯು ದಿನಾಂಕ 30.09.2016ಕ್ಕೆ ಇದ್ದಂತೆ ರೂ. 50.44 ಲಕ್ಷ ಶೇರು ಬಂಡವಾಳ, ರೂ.17.03 ಕೋಟಿ ಸಾಲ ನೀಡಿಕೆ, ರೂ.2.73 ಕೋಟಿ ಗುಂತಾವಣೆ, ರೂ.13.18 ಕೋಟಿ ಠೇವಣಿ, ರೂ.21.18 ಕೋಟಿ ದುಡಿಯುವ ಬಂಡವಾಳ, ರೂ.6.23 ಕೋಟಿ ನಿಧಿಗಳನ್ನು ಹೊಂದಿದ್ದು, ದಿನಾಂಕ 31.03.2016ಕ್ಕೆ ರೂ.85.55 ಲಕ್ಷ ಲಾಭ ಗಳಿಸಿದೆ.

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಜರುಗಿರುವ ಸಾಮಾನ್ಯ ಸಭೆಯ ವರದಿ

### ಸುರಕ್ಷಾ ಸೌಹಾರ್ದ ಸಹಕಾರಿ

**ಉಡುಪಿ :** ಸುರಕ್ಷಾ ಸೌಹಾರ್ದ ಸಹಕಾರಿ ನಿ., ಉಡುಪಿ ಸಹಕಾರಿಯ 2015–16ನೇ ಸಾಲಿನ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಬಿ.ಭಾಸ್ಕರ್ ಕಾಮತ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಹಕಾರಿಯು ಕಳೆದ ಆರ್ಥಿಕ ವರ್ಷದಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ವರ್ಷಾಂತ್ಯಕ್ಕೆ ರೂ.22 ಕೋಟಿ ಠೇವಣಿ ಸಂಗ್ರಹಿಸಿ, ರೂ.14 ಕೋಟಿ ಸಾಲ ವಿತರಿಸಿದೆ.



### ಶ್ರೀ ಮಾತಾಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ



**ಬೆಂಗಳೂರು :** ಶ್ರೀ ಮಾತಾಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ 5ನೇ ಸರ್ವ ಸದಸ್ಯರ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ವಿ.ಶಾಸ್ತ್ರಿ, ಉಪಾಧ್ಯಕ್ಷರಾದ ಶ್ರೀ ಅನಿಲ್ ಬರೂರು ಮತ್ತು ಮುಖ್ಯ ಅತಿಥಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಸಂಯುಕ್ತ ಸಹಕಾರಿಯ ನಿರ್ದೇಶಕರು ಇವರು ಉದ್ಘಾಟಿಸಿದರು.

### ಶ್ರೀ ಕೂಡಲಸಂಗಮ ವಿವಿಧೋದ್ದೇಶ ಸೌಹಾರ್ದ ಸಹಕಾರಿ




**ನೆಲಮಂಗಲ :** ಶ್ರೀ ಕೂಡಲ ಸಂಗಮ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ದ 3ನೇ ವಾರ್ಷಿಕ ಮಹಾಸಭೆಯು ಅಧ್ಯಕ್ಷರಾದ ಶ್ರೀ ಎಸ್.ಎಸ್. ಬಿರಾದಾರರವರ ಅಧ್ಯಕ್ಷತೆಯಲ್ಲಿ ದಿನಾಂಕ 25.09.2016ರಂದು ಜರುಗಿತು.



## ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್

**ಕೊಪ್ಪ** : ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಕೊಪ್ಪ (ಯಸ್ಕಾನ್) ಸಹಕಾರಿಯ 12ನೇ ಮಹಾಸಭೆ ಅಧ್ಯಕ್ಷರಾದ ಶ್ರೀ ವೈ.ಎಸ್.ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ದಿನಾಂಕ 02.07.2004ರಲ್ಲಿ ಪ್ರಾರಂಭವಾಗಿ 31.03.2016ರ ಅಂತ್ಯಕ್ಕೆ 3,138 ಸದಸ್ಯರನ್ನು ಹೊಂದಿರುತ್ತದೆ. ರೂ. 2,64,22,100/-ಗಳ ಶೇರು ಬಂಡವಾಳ ಮತ್ತು ರೂ. 3.26 ಕೋಟಿ ನಿಧಿಯನ್ನು ಹೊಂದಿರುತ್ತದೆ. ವರದಿ ಸಾಲಿನಲ್ಲಿ ರೂ. 96.52 ಕೋಟಿಗಳ ಸಾಲ ವಿತರಿಸಿದ್ದು, ರೂ. 79.91 ಕೋಟಿ ಸಾಲ ವಸೂಲಾಗಿರುತ್ತದೆ. ರೂ. 605 ಕೋಟಿ ವಹಿವಾಟು ನಡೆಸಿದ್ದು, ರೂ. 60.21 ಕೋಟಿ ದುಡಿಯುವ ಬಂಡವಾಳ ಹೊಂದಿದೆ. ರೂ. 1,13,60,506/-ಗಳ ನಿವ್ವಳ ಲಾಭ ಹೊಂದಿದ್ದು, ಸದಸ್ಯರಿಗೆ 14% ಡಿವಿಡೆಂಟ್ ಘೋಷಣೆ ಮಾಡಲಾಗಿದೆ.



## ಉದಯ ಸೌಹಾರ್ದ ಪತ್ತಿನ ಸಹಕಾರಿ

**ಬೆಂಗಳೂರು** : ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಯ 2015-16ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯು ಸಹಕಾರ ಸಮುದಾಯ ಭವನ, ಪ್ರಾದೇಶಿಕ ಸಹಕಾರ ನಿರ್ವಹಣಾ ತರಬೇತಿ ಸಂಸ್ಥೆ, ಪದ್ಮನಾಭನಗರ ಇಲ್ಲಿ ನಡೆಯಿತು. ಸಹಕಾರಿಯ ಒಟ್ಟು ದುಡಿಯುವ ಬಂಡವಾಳ ರೂ. 71 ಕೋಟಿ 51 ಲಕ್ಷಗಳಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ. 1,31,37,903/ಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರುಗಳಿಗೆ ಶೇ.17ರಷ್ಟು ಡಿವಿಡೆಂಡ್ ಘೋಷಿಸಲಾಯಿತು.



## ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ

**ಬೆಂಗಳೂರು** : ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ 6ನೇ ವಾರ್ಷಿಕ ಸರ್ವಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ ಟಿ.ಹೆಚ್. ಕರಿಯಪ್ಪರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.18.69 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ರೂ.14.23 ಕೋಟಿಗಳ ವಿವಿಧ ರೀತಿಯ ಸಾಲ ವಿತರಿಸಿರುತ್ತದೆ. 2015-16ನೇ ಸಾಲಿನಲ್ಲಿ ರೂ.1.20 ಕೋಟಿಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.25ರ ಡಿವಿಡೆಂಡ್‌ನ್ನು ವಿತರಿಸಿರುತ್ತದೆ.




## ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿ

**ಮುಧೋಳ** : ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಮುಧೋಳ ಸಹಕಾರಿಯ 10ನೇ ಸರ್ವಸಾಧಾರಣ ಸಭೆಯು ಅಧ್ಯಕ್ಷರಾದ ಶ್ರೀ ರಾಚಪ್ಪ ವಿ. ಕರೇಹೊನ್ನರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.2.39 ಕೋಟಿ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.25ರಷ್ಟು ಲಾಭಾಂಶವನ್ನು ವಿತರಿಸಲು ತೀರ್ಮಾನಿಸಲಾಯಿತು. 2015-16ನೇ ಸಾಲಿನ ಅಂತ್ಯಕ್ಕೆ 26386 ಸದಸ್ಯರನ್ನು ಹೊಂದಿದ್ದು, ರೂ.6.57 ಕೋಟಿ ಶೇರು ಬಂಡವಾಳ ಮತ್ತು ನಿಧಿಗಳನ್ನು ಹೊಂದಿದೆ. ರೂ.7325 ಕೋಟಿ ವಹಿವಾಟು ನಡೆಸಿದ್ದು, ರೂ.325 ಕೋಟಿ ಠೇವಣಿಗಳನ್ನು ಸಂಗ್ರಹಿಸಿದೆ. ಸಭೆಯಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮುರುಗೇಶ ನಿರಾಣಿ, ಮಾಜಿ ಸಚಿವರು, ಮಧ್ಯಮ ಹಾಗೂ ಭಾರಿ ಕೈಗಾರಿಕಾ ಇಲಾಖೆ, ಕರ್ನಾಟಕ ಸರಕಾರ ಇವರು ಉಪಸ್ಥಿತರಿದ್ದರು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

### ಶ್ರೀ ಶ್ರೀ ಸಾಯಿ ಸೌಹಾರ್ದ ಸಹಕಾರಿ ನಿ., ಹೊಸೂರ



ಶ್ರೀ ರಾಮಕೃಷ್ಣ ನಾರಾಯಣ ಓಂಕಾರ
ಅಧ್ಯಕ್ಷರು



ಶ್ರೀ ಶ್ರೀನಿವಾಸ ಕೋ ನಿಡೋಣಿ
ಉಪಾಧ್ಯಕ್ಷರು

### ಶ್ರೀ ಕಾರ್ತಿಕೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಂಡೂರು



ಶ್ರೀ ಎನ್.ಉಜ್ಜಿನಪ್ಪ
ಅಧ್ಯಕ್ಷರು



ಶ್ರೀ ಅಮ್ಮನಕೇರಿ ಶಿವಪ್ಪ
ಉಪಾಧ್ಯಕ್ಷರು



## ಸ್ವರ್ಣಭಾರತಿ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ

**ಹಾಸನ :** ಸ್ವರ್ಣಭಾರತಿ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾಸನ ಸಹಕಾರಿಯ ವಾರ್ಷಿಕ ಸರ್ವಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ ಬಿ.ಚಾಮರಾಜೇಗೌಡರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.5,30,945/–ಗಳ ನಿವ್ವಳ ಲಾಭ ಗಳಿಸಿದ್ದು, ಶೇ.0.25ರಷ್ಟು ಲಾಭಾಂಶ ಹಂಚಲು ತೀರ್ಮಾನಿಸಲಾಯಿತು.



## ಶ್ರೀ ಬಸವೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ

**ಕೊಪ್ಪಳ :** ಶ್ರೀ ಬಸವೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ 8ನೇ ವಾರ್ಷಿಕ ಮಹಾಸಭೆಯು ಅಧ್ಯಕ್ಷರಾದ ಶ್ರೀ ನಿಜಗುಣೆಪ್ಪ ಶೆಟ್ಟರರವರ ಅಧ್ಯಕ್ಷತೆಯಲ್ಲಿ ಜರುಗಿತು. ವರದಿ ವರ್ಷಾಂತ್ಯಕ್ಕೆ ಸಹಕಾರಿಯು ಒಟ್ಟು ರೂ. 38.46 ಲಕ್ಷ ಶೇರು ಬಂಡವಾಳ, ರೂ. 464.48 ಲಕ್ಷ ಠೇವಣಿ, ರೂ. 422.78 ಲಕ್ಷ ಸಾಲ, ರೂ.28.87 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.20 ದರದಲ್ಲಿ ಡಿವಿಡೆಂಡ್ ನೀಡಲು ಸಭೆಯು ನಿರ್ಧರಿಸಿತು.



## ದಿ ದೈವಜ್ಞ ಬ್ರಾಹ್ಮಣ ಪತ್ತಿನ ಸೌಹಾರ್ದ ಸಹಕಾರಿ

**ಸವಣೂರು :** ದಿ ದೈವಜ್ಞ ಬ್ರಾಹ್ಮಣ ಪತ್ತಿನ ಸೌಹಾರ್ದ ಸಹಕಾರಿ ನಿ., ಸವಣೂರ ಸಹಕಾರಿಯ ತೃತೀಯ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ಮೋಹನ್ ತಮ್ಮಣ್ಣ ರಾಯ್ಕರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ. 5.68 ಕೋಟಿ ಠೇವಣಿ ಸಂಗ್ರಹಿಸಿದ್ದು, ರೂ. 4.12 ಕೋಟಿಗಳ ಸಾಲ ಮತ್ತು ಮುಂಗಡಗಳನ್ನು ವಿತರಿಸಿದೆ. ರೂ. 6.41 ಲಕ್ಷಗಳ ಲಾಭ ಗಳಿಸಿದ್ದು, ಶೇ. 10ರಷ್ಟು ಡಿವಿಡೆಂಡ್ ಘೋಷಿಸಿದೆ.

## ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ

**ಹಾಸನ :** ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಸಹಕಾರಿಯ ಸಾಮಾನ್ಯ ಸರ್ವ ಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ ಎಂ.ಕೆ. ರಮೇಶ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ಒಟ್ಟು ರೂ.43,01,575/–ಗಳ ನಿವ್ವಳ ಲಾಭ ಗಳಿಸಿದ್ದು, ಮೂಲ ಶೇರುದಾರರಿಗೆ ಶೇ.25ರಷ್ಟು ಲಾಭಾಂಶ ಘೋಷಿಸಲಾಯಿತು.



## ಜನಪ್ರಿಯ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್

**ಶಿವಮೊಗ್ಗ :** ಜನಪ್ರಿಯ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ನಿ., ಶಿವಮೊಗ್ಗ ಸಹಕಾರಿಯ 4ನೇ ವಾರ್ಷಿಕ ಮಹಾಸಭೆಯು ಅಧ್ಯಕ್ಷರಾದ ಶ್ರೀಮತಿ ಉಷಾ ಜಯರಾಜ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ರೂ.11.82 ಲಕ್ಷ ಲಾಭ ಗಳಿಸಿರುತ್ತದೆ.



## ಶ್ರೀ ಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ

**ಶಹಾಪುರ :** ಶ್ರೀ ಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ., ಶಹಾಪುರ ಸಹಕಾರಿಯ 6ನೇ ವಾರ್ಷಿಕ ಮಹಾಸಭೆ. 2015–16ನೇ ಸಾಲಿನಲ್ಲಿ ಸಹಕಾರಿಯು ರೂ.35,37,613/–ಗಳ ವ್ಯವಹಾರ ನಡೆಸಿದ್ದು, ನಿವ್ವಳ ಲಾಭ ರೂ.2,67,503/–ಗಳನ್ನು ಗಳಿಸಿರುತ್ತದೆ.



# ವಾರ್ಷಿಕೋತ್ಸವ ಸಮಾರಂಭ ಹಾಗೂ ಪ್ರಥಮ ವಾರ್ಷಿಕ ಸರ್ವಸಾಧಾರಣ ಸಭೆ



**ಚಾಮರಾಜನಗರ :** ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಚಾಮರಾಜನಗರ ಸಹಕಾರಿಯ ಪ್ರಥಮ ವಾರ್ಷಿಕೋತ್ಸವ ಸಮಾರಂಭ ಹಾಗೂ ಪ್ರಥಮ ವಾರ್ಷಿಕ ಸರ್ವಸಾಧಾರಣ ಸಭೆಯು ಅಧ್ಯಕ್ಷರಾದ ಶ್ರೀ ಜಯಸಿಂಹರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಮಾರಂಭವನ್ನು ನಗರ ಸಭೆಯ ಅಧಕ್ಷರಾದ ಶ್ರೀಮತಿ ಎಸ್.ಎಸ್. ರೇಣುಕಾರವರು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ, ಚೂಡಾ ಅಧ್ಯಕ್ಷರಾದ ಶ್ರೀ ಸೈಯದ್ ರಫೀ, ಭಾರತೀಯ ಸಹಕಾರ ಬ್ಯಾಂಕ್‌ನ ಸಂಸ್ಥಾಪಕ ಮತ್ತು ಬಂಜಾರ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಮೋಹನ್‌ರಾಜ್ ಮೆಘಾವತ್, ಜನಪರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸದಾಶಿವ ಗಟ್ಟವಾಡಿಪುರ ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಟರಾಜರವರು ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಸಮಾರಂಭವನ್ನುದ್ದೇಶಿಸಿ ಮಾತನಾಡುತ್ತಾ ಸೌಹಾರ್ದ ಸಹಕಾರಿಗಳ ಮುಖ್ಯ ಉದ್ದೇಶ ಗ್ರಾಹಕರನ್ನು ಲೇವಾದೇವಿಗಾರರಿಂದ, ಖಾಸಗಿ ಬಡ್ಡಿದಂಧೆಕೋರರ ಶೋಷಣೆಯಿಂದ ತಪ್ಪಿಸಿ, ಅವರಿಗೆ ಅಗತ್ಯ ಸಾಲ–ಸೌಲಭ್ಯವನ್ನು ಕಡಿಮೆ ಬಡ್ಡಿದರದಲ್ಲಿ ನೀಡಿ, ಅವರ ಸರ್ವತೋಮುಖ ಅಭಿವೃದ್ಧಿಗೆ ನೆರವಾಗುವುದು ಎಂದರು.



ಶ್ರೀ ಎರ್ರಿಸ್ವಾಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಚಿಕ್ಕೋಡಿ ಸಹಕಾರಿಯ ವಾರ್ಷಿಕ ಸರ್ವ ಸಾಧಾರಣ ಸಭೆ



ಶ್ರೀ ಸಂಗಮೇಶ್ವರ ಕೋ–ಆಪರೇಟಿವ್ ಕ್ರೆಡಿಟ್ ಸೌಹಾರ್ದ ನಿ., ವಿಜಯಪುರ ಸಹಕಾರಿಯ ವಾರ್ಷಿಕ ಮಹಾಸಭೆ.



ಶ್ರೀ ಉದಯ ರವಿ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು ಸಹಕಾರಿಯ 16ನೇ ವರ್ಷದ ಸರ್ವಸದಸ್ಯರ ಮಹಾಸಭೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ.



ವಿಕಾಸಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ ಸಹಕಾರಿಯ 4ನೇ ವಾರ್ಷಿಕ ಮಹಾಸಭೆ.



ಶ್ರೀ ಮಾತಾ ವೈಭವ ಮಹಾಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಮಟಾ ಸಹಕಾರಿಯ 11ನೇ ಸರ್ವಸಾಧಾರಣ ಸಭೆಯು ಅಧ್ಯಕ್ಷರಾದ ಶ್ರೀ ಟಿ.ಎನ್.ನಾಯ್ಕರುರವರ ಅಧ್ಯಕ್ಷತೆಯಲ್ಲಿ ಜರುಗಿತು.



ಶ್ರೀ ಸಾಯಿ ಸಿರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಸಹಕಾರಿಯ 10ನೇ ಸರ್ವ ಸದಸ್ಯರ ವಾರ್ಷಿಕ ಸಭೆ.

## ಚಿಕ್ಕೇರೂರ ಪತ್ತಿನ ಸೌಹಾರ್ದ ಸಹಕಾರಿ

ಚಿಕ್ಕೇರೂರ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕೋರೂರ ಸಹಕಾರಿಯ ವಾರ್ಷಿಕ ಮಹಾಸಭೆ. ಸಹಕಾರಿಯು ರೂ.54,30,752/-ಗಳ ಲಾಭ ಗಳಿಸಿದ್ದು, ಶೇ.15ರಷ್ಟು ಡಿವಿಡೆಂಡ್ ಘೋಷಿಸಲಾಯಿತು. ಸಹಕಾರಿಯು 2015-16ನೇ ಸಾಲಿನಲ್ಲಿ ರೂ. 52 ಲಕ್ಷಗಳ ಶೇರು ಬಂಡವಾಳ ಹೊಂದಿದ್ದು, ರೂ. 151.47 ಲಕ್ಷಗಳ ಕಾಯ್ದಿಟ್ಟ ನಿಧಿ, ರೂ.782.49 ಲಕ್ಷಗಳ ಠೇವಣಿ ಹಾಗೂ ರೂ.390.78 ಲಕ್ಷಗಳ ಸಾಲ ವಿತರಣೆ ಮಾಡಿರುತ್ತದೆ.



ಹೂಗಾರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ ಸಹಕಾರಿಯ 2ನೇ ವಾರ್ಷಿಕ ಸರ್ವಸಾಧಾರಣ ಸಭೆ.



ನಂದಿನಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕಟೀಲು ಸಹಕಾರಿಯ ಸರ್ವಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ ಕೆ.ನೀಲಯ ಕೋಟ್ಯಾನ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು.



## ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್‌ನ ಶಾಖೆಯ ಉದ್ಘಾಟನೆ

ಸುರತ್ಕಲ್ : ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿ., ಕಾರವಾರ ಸಹಕಾರಿಯ 44ನೇ ಶಾಖೆಯನ್ನು ದಿನಾಂಕ 02.10.2016ರಂದು ಸಿಟಿ ಪರ್ಲ್, ಮೊದಲನೇ ಮಹಡಿ, ಕೇಂದ್ರ ಮೈದಾನದ ಹತ್ತಿರ, ಬಜ್ಪೆ ರೋಡ್, ಸುರತ್ಕಲ್‌ನಲ್ಲಿ ಸುರತ್ಕಲ್‌ನ ಸೇಕ್ರೆಡ್ ಹಾರ್ಟ್ ಚರ್ಚ್‌ನ ಧರ್ಮಗುರುಗಳಾದ ವಂದನೀಯ ಫಾ. ಪೌಲ್ ಪಿಂಟೊರವರ ಆಶೀರ್ವಚನದಲ್ಲಿ ಶ್ರೀ ಮೊಹಿಯುದ್ದಿನ್ ಬಾವಾ, ವಿಧಾನಸಭಾ ಸದಸ್ಯರು, ಸುರತ್ಕಲ್ ಇವರು ಉದ್ಘಾಟಿಸಿದರು.

## ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ ಶಾಖೆಯ ಉದ್ಘಾಟನೆ

**ಗೋಕಾಕ :** ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಸಹಕಾರಿಯ ಗೋಕಾಕ ತಾಲ್ಲೂಕಿನ ಬೆಟಗೇರಿ ಗ್ರಾಮದಲ್ಲಿ ನಡೆದ ಪ್ರಥಮ ಶಾಖೆಯ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಗೋಕಾಕ ಶೂನ್ಯಸಂಪಾದನಾ ಮಠದ ಮುರುಘರಾಜೇಂದ್ರ ಮಹಾಸ್ವಾಮೀಜಿಯವರು ಉದ್ಘಾಟಿಸಿದರು. ಕಲ್ಲೋಳಿ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ.,ದ ಸಂಸ್ಥಾಪಕ ಅಧ್ಯಕ್ಷರು ಹಾಗೂ ಜಿ.ಪಂ. ಮಾಜಿ ಅಧ್ಯಕ್ಷರಾದ ಶ್ರೀ ಈರಣ್ಣ ಕಡಾಡಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.





## ಆರೋಗ್ಯ ಸೇವೆಯ ಮೂಲಕ ಸಮಾಜ ಸೇವೆ

**ಹೊನ್ನಾವರ :** ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿ., ಕಾರವಾರ ಹಾಗೂ ಅಲ್ಲಿನ ಸ್ಥಳೀಯ ಸಂಸ್ಥೆಗಳ ಸಹಕಾರದಿಂದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಫಾಧರ್ ಮುಲ್ಲರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಕಂಕನಾಡಿ, ಮಂಗಳೂರು ಇದರ ಸಹಯೋಗದೊಂದಿಗೆ ದಿನಾಂಕ 23.10.2016ರಂದು ನ್ಯೂ ಇಂಗ್ಲೀಷ್ ಸ್ಕೂಲ್, ಶರಾವತಿ ವೃತ್ತ, ಮುನ್ಸಿಪಾಲಿಟಿ ಹತ್ತಿರ, ಹೊನ್ನಾವರದಲ್ಲಿ ನಡೆಸಲಾಯಿತು. ಶಿಬಿರದಲ್ಲಿ ಫಾದರ್ ಮುಲ್ಲರ್ ಆಸ್ಪತ್ರೆಯ ನುರಿತ 30 ತಜ್ಞ ವೈದ್ಯರ ತಂಡ ಹಾಗೂ 10 ಹಿರಿಯ ವೈದ್ಯರು ಆಗಮಿಸಿ, ಕಿವಿ-ಮೂಗು-ಗಂಟಲು ರೋಗ, ಸ್ತ್ರೀ ರೋಗ, ಮಕ್ಕಳ ರೋಗ, ನೇತ್ರ ಚಿಕಿತ್ಸೆ, ಎಲುಬು ಚಿಕಿತ್ಸೆ, ಚರ್ಮರೋಗ, ಶಸ್ತ್ರ ಚಿಕಿತ್ಸೆ, ಇ.ಸಿ.ಜಿ ಮತ್ತು ಇ.ಸಿ.ಓ ಹಾಗೂ ಜನರಲ್ ಚಿಕಿತ್ಸೆಗೆ ಸಂಬಂಧಿಸಿದಂತೆ ತಪಾಸಣೆಯನ್ನು ನಡೆಸಲಾಯಿತು. ಸುಮಾರು 450ಕ್ಕೂ ಹೆಚ್ಚು ಜನರು ಶಿಬಿರದ ಪ್ರಯೋಜನವನ್ನು ಪಡೆದರು.

# ನಿಮ್ಮ ಪ್ರಶ್ನೆ




# ನಮ್ಮ ಉತ್ತರ

**ಬಿ.ವಿ. ರವೀಂದ್ರನಾಥ್**
ಸನ್ನದು ಲೆಕ್ಕಪರಿಶೋಧಕರು,
ಸಾಗರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

ಶ್ರೀ ಬಿ.ವಿ.ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಸಹಕಾರಿಗಳ ಲೆಕ್ಕಪತ್ರ ವ್ಯವಸ್ಥೆ, ಲೆಕ್ಕಪರಿಶೋಧನೆ ಮತ್ತು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆಗಳ ವಿಷಯವಾಗಿ ಸಹಕಾರಿಗಳಲ್ಲಿ ಪದೇ ಪದೇ ಉದ್ಭವಿಸುವ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡಿರುವುದನ್ನು ಜುಲೈ 2016ರ ಮಾಹೆಯಲ್ಲಿ ಪ್ರಕಟಿಸಲಾಗಿತ್ತು, ಅದರ ಮುಂದುವರೆದ ಭಾಗದಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

**1. ಪತ್ತಿನ ವ್ಯವಹಾರ ಮಾಡುವವರಿಗೆ ಟ್ರೇಡ್ ಲೈಸೆನ್ಸ್ ಅಗತ್ಯವಿದೆಯೇ?**

ಯಾವುದೇ ಪುರಸಭೆ/ ನಗರಸಭೆ/ ನಗರಾಭಿವೃದ್ಧಿ ಪ್ರಾಧಿಕಾರ/ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವೃತ್ತಿ, ಕಸುಬು, ವ್ಯಾಪಾರ, ಉದ್ದಿಮೆ, ವಾಣಿಜ್ಯ ಸೇವೆ, ಬ್ಯಾಂಕಿಂಗ್/ ಹಣಕಾಸು/ ಶೇರು ವ್ಯವಹಾರ, ಇನ್ನಿತರೇ ವಹಿವಾಟುಗಳನ್ನು ನಡೆಸುತ್ತಿದ್ದಲ್ಲಿ ಕರ್ನಾಟಕ ಪುರಸಭೆ ಕಾಯ್ದೆ, 1964ರಡಿಯಲ್ಲಿ ವ್ಯಾಪಾರ ಪರವಾನಗಿ ಪಡೆಯಬೇಕಿರುತ್ತದೆ.

**2. ಸಹಕಾರಿ ಸಂಸ್ಥೆಗಳಿಗೆ ಕಾರ್ಮಿಕ ಕಾನೂನುಗಳು ಅನ್ವಯವಾಗುತ್ತದೆಯೇ?**

ಸಹಕಾರಿಗಳು ಲಾಭೋದ್ದೇಶಿತ ವಾಣಿಜ್ಯೋದ್ಯಮ ಸಂಸ್ಥೆಗಳು ಎಂದು ಗುರುತಿಸಿಕೊಂಡಿರುವುದರಿಂದ ಸಾಮಾನ್ಯವಾಗಿ ಯಾವುದೇ ವಾಣಿಜ್ಯೋದ್ಯಮಗಳಿಗೆ ಅನ್ವಯಿಸುವ ಎಲ್ಲಾ ಕಾರ್ಮಿಕ ಕಾಯ್ದೆಗಳು ಯಥಾವತ್ತಾಗಿ ಅನ್ವಯಿಸುತ್ತವೆ. ಅವುಗಳಲ್ಲಿ ಕೆಳಕಾಣಿಸಿದ ಕಾರ್ಮಿಕ ಕಾಯ್ದೆಗಳು ಪ್ರಮುಖವಾಗಿರುತ್ತವೆ.

1. Payment of Wages Act, 1936
2. Workmen's Compensation Act, 1923
3. The Maternity Benefit Act, 1961
4. The Payment of Bonus Act, 1965
5. The Sexual Harassment of Women at Workplace Act
6. Minimum Wages Act, 1948
7. Employees State Insurance Act (ESIC)
8. Employees Provident Fund Act
9. Payment of Gratuity Act, 1972

**3. ಸಹಕಾರಿ ಸಂಸ್ಥೆಗಳಿಗೆ ಮಾಹಿತಿ ಹಕ್ಕು ಕಾಯ್ದೆ ಅನ್ವಯವಾಗುತ್ತದೆಯೇ?**

ಮಾನ್ಯ ಸರ್ವೋಚ್ಚ ನ್ಯಾಯಲಯದ ತೀರ್ಪಿನಂತೆ ಸಹಕಾರಿಗಳು ಸಾರ್ವಜನಿಕ ಪ್ರಾಧಿಕಾರವಲ್ಲವಾದ್ದರಿಂದ ಸಹಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಅನ್ವಯಿಸುವುದಿಲ್ಲ. ಆದರೆ, ಸರ್ಕಾರದಿಂದ ಗಮನಾರ್ಹ ಮೊತ್ತದ (substantial) ಪಾಲುಧನ ಪಡೆದ ಯಾ ಖಾಯಂ ಅನುದಾನಕ್ಕೆ (Permanent Grant) ಪಾತ್ರವಾದ ಯಾ ಸರಕಾರದಿಂದ ನಾಮ ನಿರ್ದೇಶನಗೊಂಡ ನಿರ್ದೇಶಕರನ್ನು ಹೊಂದಿದ ಸಹಕಾರಿಗಳು ಸಾರ್ವಜನಿಕ ಪ್ರಾಧಿಕಾರವಾಗುವುದರಿಂದ ಅಂತಹ ಸಹಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಅನ್ವಯಿಸುತ್ತದೆ.

**4. ಕೆವೈಸಿ ನಿಯಮಗಳು ಪತ್ತಿನ ಸಹಕಾರಿಗಳಿಗೆ ಅನ್ವಯವಾಗುತ್ತದೆಯೇ? ಅವುಗಳ ಪಾಲನೆ ಹೇಗೆ?**

ಕೆವೈಸಿ ನಿಯಮಗಳ ಉದ್ದೇಶ ಯಾವುದೇ ಸಂಸ್ಥೆಯನ್ನು ಯಾವುದೇ ವ್ಯಕ್ತಿಯು ದುರುಪಯೋಗಪಡಿಸಿಕೊಂಡು ಯಾವುದೇ ಆರ್ಥಿಕ ಅಪರಾಧ ಪ್ರಕ್ರಿಯೆಗಳಲ್ಲಿ ತೊಡಗಿಕೊಳ್ಳಲು ಅನುವು ಮಾಡಿಕೊಡಬಾರದೆಂಬುದಾಗಿರುತ್ತದೆ. ಆದ್ದರಿಂದ ತಾಂತ್ರಿಕವಾಗಿ ಯಾ ಕಾನೂನಾತ್ಮಕವಾಗಿ ಕೆವೈಸಿ ನಿಯಮಗಳು ಪತ್ತಿನ ಸಹಕಾರಿಗಳಿಗೆ ಅನ್ವಯ ಆಗುವುದಿಲ್ಲವಾದರೂ ಸಹಕಾರಿಗಳು ಕೆವೈಸಿ ನಿಯಮಗಳನ್ನು ಪಾಲಿಸುವುದು ಅವುಗಳ ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಯಾಗಿರುತ್ತದೆ.

**5. ಪತ್ತಿನ ಚಟುವಟಿಕೆಗಳಿಗೂ ಬ್ಯಾಂಕಿಂಗ್ ಚಟುವಟಿಕೆಗಳಿಗೂ ವ್ಯತ್ಯಾಸವೇನು?**

| | ಪತ್ತಿನ ಚಟುವಟಿಕೆ | ಬ್ಯಾಂಕಿಂಗ್ ಚಟುವಟಿಕೆ |
|---|---|---|
| ಅರ್ಥ ವಿವರಣೆ | ಗ್ರಾಹಕರಿಗೆ ಸಾಲ ನೀಡಿ ಬಡ್ಡಿ ವಿಧಿಸಿ ವಸೂಲು ಮಾಡುವುದು, ಗ್ರಾಹಕರಿಂದ ಠೇವಣಿ ಸ್ವೀಕರಿಸಿ ಬಡ್ಡಿ ಸಹಿತ ಹಿಂದಿರುಗಿಸುವುದು. | ಠೇವಣಿ ಸಂಗ್ರಹಣೆ, ಸಾಲ ನೀಡುವಿಕೆಯೊಂದಿಗೆ ಆರ್‌ಬಿಐ ನಿರ್ದಿಷ್ಟಪಡಿಸಿದ ಇನ್ನೂ ಕೆಲವು ಚಟುವಟಿಕೆಗಳು. |
| ನೋಂದಣಿ | ಆಯಾ ರಾಜ್ಯಗಳ ಅನ್ವಯಿಸುವ ಕಾಯ್ದೆಯಡಿಯಲ್ಲಿ ನೋಂದಣಿ. | ಭಾರತೀಯ ರಿಸರ್ವ್ ಬ್ಯಾಂಕಿನೊಂದಿಗೆ ನೋಂದಣಿ. |
| ನೋಂದಣಿಗೊಂಡಿರುವ ಕಾಯ್ದೆಯ ಅಂಶಗಳು | ಅನ್ವಯಿಸುತ್ತದೆ. | ಅನ್ವಯಿಸುತ್ತದೆ. |
| ಆರ್ ಬಿ ಐ ನಿಯಮಗಳು | ಅನ್ವಯಿಸುವುದಿಲ್ಲ. | ಅನ್ವಯಿಸುತ್ತದೆ. |
| ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ | ಅನ್ವಯಿಸುವುದಿಲ್ಲ. | ಅನ್ವಯಿಸುತ್ತದೆ. |
| ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯ್ದೆ | ಅನ್ವಯಿಸುವುದಿಲ್ಲ. | ಅನ್ವಯಿಸುತ್ತದೆ. |
| ವರದಿ ಸಲ್ಲಿಸುವಿಕೆ | ನೋಂದಣಿಗೊಂಡ ಕಾಯ್ದೆಯ ನಿಯಮಗಳಂತೆ. | ಆರ್‌ಬಿಐ ಸೂಚಿಸಿದ ರೀತಿಯಲ್ಲಿ. |
| ಚಟುವಟಿಕೆಗಳು | ನೋಂದಣಿಯಾದ ಕಾಯ್ದೆಯಡಿಯಲ್ಲಿನ ಅವಕಾಶದಂತೆ. | ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆಯಲ್ಲಿ ನಿರ್ದಿಷ್ಟಪಡಿಸಿದಂತೆ. |
| ಪದಗಳ ಬಳಕೆ | ತನ್ನ ಚಟುವಟಿಕೆಗಳಲ್ಲಿ ಬ್ಯಾಂಕ್, ಬ್ಯಾಂಕಿಂಗ್, ಬ್ಯಾಂಕರ್ ಎಂಬಿತ್ಯಾದಿ ಪದಗಳನ್ನು ಬಳಸುವಂತಿಲ್ಲ. | ಬ್ಯಾಂಕ್, ಬ್ಯಾಂಕಿಂಗ್, ಬ್ಯಾಂಕರ್ ಎಂಬಿತ್ಯಾದಿ ಪದಗಳನ್ನು ಸೂಕ್ತವಾಗಿ ಬಳಸಬಹುದು. |

# ಮಾರಾಟಾಧಿಕಾರಿಯು ಕೈಗೊಳ್ಳಬೇಕಾದ ಕ್ರಮ

ಎಸ್.ಎಸ್.ಕಟಗೇರಿ, ಸಹಾಯಕ ನಿಬಂಧಕರು (ನಿವೃತ್ತ)

ಅಮಲ್ಜಾರಿ ಅರ್ಜಿ ಸ್ವೀಕೃತವಾದ ತಕ್ಷಣ ಮಾರಾಟಾಧಿಕಾರಿಗಳು ನಿಗದಿಪಡಿಸಿದ ರಿಜಿಸ್ಟರ್‌ನಲ್ಲಿ ತಪ್ಪದೇ ದಾಖಲು ಮಾಡಿಕೊಳ್ಳಬೇಕು. ಅನಂತರ 7 ದಿನಗಳೊಳಗಾಗಿ ಹಣ ಪಾವತಿ ಮಾಡುವಂತೆಯೂ ತಪ್ಪಿದ್ದಲ್ಲಿ ಜಪ್ತಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಯಪಡಿಸುವ ನೋಟೀಸನ್ನು ಸಾಲಗಾರರಿಗೆ/ ಜಾಮೀನುದಾರರಿಗೆ ಕಳುಹಿಸಬೇಕು. ಒಂದು ವೇಳೆ ಸಾಲಗಾರರು/ ಜಾಮೀನುದಾರರು ನೋಟೀಸಿಗೆ ಸ್ಪಂದಿಸದಿದ್ದಲ್ಲಿ ನಿಗದಿತ ನಮೂನೆಯಲ್ಲಿನ ವಿವಿಧ ನಮೂನೆಗಳ ಬಳಕೆಯ ಮೂಲಕ ವಸೂಲಾತಿಗಾಗಿ ಮುಂದಿನ ಕ್ರಮಗಳನ್ನು ಸಕಾಲದಲ್ಲಿ ವಿಳಂಬಕ್ಕೆ ಅವಕಾಶವನ್ನೀಯದಂತೆ ಜರುಗಿಸಬೇಕು.

ವಿವಿಧ ನಮೂನೆಗಳ ವಿಶೇಷತೆಯನ್ನು ಬಿಂಬಿಸುವ ಸಂಕ್ಷಿಪ್ತ ವಿವರಣೆ ಕೆಳಕಾಣಿಸಿದಂತಿದೆ.

### ನಮೂನೆ : 4

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 13 (3)ರ ಮೇರೆಗೆ ನಿಗದಿಪಡಿಸಲಾಗಿದೆ. ಇದನ್ನು ಜಪ್ತಿ ಹುಕುಂ ತಗಾದೆ ಪತ್ರ/ ನೋಟೀಸ್ ಹಾಗೂ ಡಿಸ್ಟ್ರಂಟ್ ವಾರಂಟ್ ಎಂದು ಕೂಡಾ ಕರೆಯಲಾಗುತ್ತದೆ. ಇದೊಂದು ಮಹತ್ವದ ನಮೂನೆ, ಇದನ್ನು ಕಟ್‌ಬಾಕಿದಾರನ ಮೇಲೆ ಜಾರಿ ಮಾಡದೇ ಆತನ ವಾಸಸ್ಥಾನದಲ್ಲಿ ಪ್ರವೇಶ ಮಾಡಲು ಬರುವುದಿಲ್ಲ. ಹಾಗೆ ಮಾಡಿದಲ್ಲಿ ಅದು ಐಪಿಸಿ ಅಡಿಯಲ್ಲಿ 'ಟ್ರೆಸ್‌ಪಾಸ್' (Trust Pass) ಅಪರಾಧವಾಗುತ್ತದೆ. ಜಪ್ತಿ ಹುಕುಂನಲ್ಲಿ ಯಾವ ಬ್ಯಾಂಕಿಗೆ, ಯಾರಿಂದ, ಯಾವ ಅವಾರ್ಡ್ ಪ್ರಕಾರ, ಎಷ್ಟು ರಕಂ ಬರಬೇಕು, ಅವಾರ್ಡ್ ತಾರೀಖಿನಿಂದ ವಸೂಲಾಗಬೇಕಾದ ಬಡ್ಡಿ ದರ ಇತ್ಯಾದಿ ವಿವರಗಳಲ್ಲದೇ ಯಾರಿಗೆ ಜಪ್ತಿ ಮಾಡಲು ಅಧಿಕಾರ ಕೊಟ್ಟಿದೆ ಎಂಬ ಬಗ್ಗೆ ಸ್ಪಷ್ಟ ನಿರ್ದೇಶನ ಇರುತ್ತದೆ. ಇದನ್ನು ಕೊಡುವವರು ವಸೂಲಾಧಿಕಾರಿಗಳಾದರೂ ಜಾರಿ ಮಾಡುವವರು ಸಹಕಾರಿ ಮಾರಾಟಾಧಿಕಾರಿ. ಇದನ್ನು ಜಾರಿ ಮಾಡುವ ಕುರಿತಾದ ವಿಧಾನವನ್ನು ಕರ್ನಾಟಕ ಸೌಹಾರ್ದ ನಿಯಮಗಳು, 2004ರ ನಿಯಮ 15(ಎ)ರಲ್ಲಿ ಸ್ಪಷ್ಟವಾಗಿ ವಿವರಿಸಿದೆ.

### ನಮೂನೆ : 5

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 15(ಎ) ರ ಮೇರೆಗೆ ನಿಗದಿಪಡಿಸಲಾದ ನಮೂನೆ ಇದು ಜಪ್ತಿ ಮಾಡಲಾದ ಚರಸ್ವತ್ತುಗಳ ಪಟ್ಟಿ (ಮೂವೆಬಲ್ಸ್)

- ಜಪ್ತಿ ಮಾಡುವಾಗ ಪಂಚನಾಮೆ ಮಾಡಬೇಕು.
- ಪಂಚರ ಸಹಿ, ಸೌಹಾರ್ದ ಸಹಕಾರಿ ಬ್ಯಾಂಕಿನ ಮುಖ್ಯಾಧಿಕಾರಿ ಸಹಿ ಪಡೆಯಬೇಕು.
- ಪಂಚಮತಿ ಕಿಮ್ಮತ್ತು ಬಗ್ಗೆ ಪಂಚನಾಮೆ (ಮಾರುಕಟ್ಟೆ ಬೆಲೆ ಪ್ರಕಾರ) ಜರುಗಿಸಿ ಪಂಚರ ಸಹಿ ಪಡೆಯಬೇಕು.
- ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ 60ನೇ ಪ್ರಕರಣದ ಅಡಿಯಲ್ಲಿ ಜಪ್ತಿಯಿಂದ ವಿನಾಯಿತಿ ಪಡೆದಿರುವ ಚರಸ್ವತ್ತುಗಳನ್ನು ಈ ನಿಯಮಗಳ ಮೇರೆಗೆ ಜಪ್ತಿ ಅಥವಾ ಮಾರಾಟ ಮಾಡತಕ್ಕದ್ದಲ್ಲ.

### ನಮೂನೆ : 6

ಮೇಲಿನಂತೆ ಮಾರಾಟಾಧಿಕಾರಿಗಳಿಂದ ಜಪ್ತಿ ಮಾಡಲಾದ ಚರಸ್ವತ್ತುಗಳನ್ನು ಮಾರಾಟ ಮಾಡಲಾಗುವ ದಿನಾಂಕ ನಿಗದಿಪಡಿಸಿ ಹೊರಡಿಸಲಾದ ಹರಾಜು ಅಧಿಸೂಚನೆ. (ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 15 (ಎ)ರ ನಮೂನೆ–5)

- 15 ದಿನಗಳ ಮುಂಚಿತವಾಗಿ ಹೊರಡಿಸಬೇಕು. ಆದರೆ ಶೀಘ್ರವಾಗಿ ನಾಶವಾಗುವ ಪದಾರ್ಥಗಳನ್ನು ಜಪ್ತಿ ಮಾಡಿದ್ದಲ್ಲಿ ಈ 15 ದಿನಗಳ ಗಡುವು ಅನ್ವಯವಾಗುವುದಿಲ್ಲ. ಉದಾ: ಕಾಯಿಪಲ್ಲೆ, ಹಾಲು, ಮೊಟ್ಟೆ, ಮಾಂಸ ಇತ್ಯಾದಿ.
- ಅಧಿಸೂಚನೆಯನ್ನು ಮನೆ, ವಠಾರದಲ್ಲಿ ಅಂಟಿಸಿದ ಬಗ್ಗೆ ದಾಖಲಾತಿ ಇಡಬೇಕು.
- ಡಂಗುರ ಸಾರಿದ ಬಗ್ಗೆ ಪಾವತಿ ಪಡೆದಿರಬೇಕು.
- ಜಾಹೀರ ಲಿಲಾವ/ ಹರಾಜು ನಡವಳಿಕೆಗಳನ್ನು ದಾಖಲು ಮಾಡಬೇಕು.
- ಅನಿವಾರ್ಯ ಕಾರಣಗಳಿಂದಾಗಿ ಲಿಲಾವು/ ಹರಾಜು ಮುಂದೂಡದಿದ್ದಲ್ಲಿ ಪುನ: ನೋಟೀಸು/ ಅಧಿಸೂಚನೆ ಹೊರಡಿಸಬೇಕು.

### ನಮೂನೆ : 7

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 17(2) ರ ಮೇರೆಗೆ ಸಮಯದ ಗಡುವು ನಿಗದಿಪಡಿಸಿ 10 ದಿನಗಳೊಳಗಾಗಿ ಹಣ ಪಾವತಿಸುವಂತೆ ವಸೂಲಾಧಿಕಾರಿಗಳು ಸಾಲಗಾರರಿಗೆ/ ಜಾಮೀನುದಾರರಿಗೆ ಸೂಚಿಸುವ ನೋಟೀಸು. ಪಾವತಿಸಲು ತಪ್ಪಿದಲ್ಲಿ ಅವರ ಸ್ಥಿರಸ್ವತ್ತು (ಇಮ್ಯುವೆಬಲ್ಸ್) ಜಪ್ತಿ ಮಾಡಿ ಮಾರಾಟ ಮಾಡಲಾಗುವುದೆಂದು ನೋಟೀಸಿನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ ಮತ್ತು ಸ್ಥಿರಾಸ್ತಿಯ ವಿವರಗಳನ್ನು ನಮೂದಿಸಲಾಗಿರುತ್ತದೆ.

### ನಮೂನೆ : 8

ಸಾಲಗಾರನ/ ಜಾಮೀನುದಾರರ ಸ್ಥಿರಾಸ್ತಿ ಈ ಮುಂಚೆ ಜಪ್ತಿಯಾಗಿಲ್ಲದಿದ್ದರೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 17(2) (ಸಿ) ಮೇರೆಗೆ ಸ್ಥಿರ ಸ್ವತ್ತುಗಳನ್ನು ಜಪ್ತಿ ಮಾಡಿ ಬಾಕಿ ಹಣ ಪಾವತಿಸಲು ದಿನಾಂಕ ನಿಗದಿಪಡಿಸಿ ಮಾರಾಟಾಧಿಕಾರಿಯು ಸಾಲಗಾರನಿಗೆ/ ಜಾಮೀನುದಾರನಿಗೆ ನೋಟೀಸು ನೀಡಬೇಕು. ನಿಗದಿಪಡಿಸಿದ ದಿನಾಂಕದೊಳಗೆ ಹಣ ಪಾವತಿಸಲು ತಪ್ಪಿದಲ್ಲಿ ಜಪ್ತಿ ಮಾಡಲಾದ ಸ್ಥಿರಾಸ್ತಿಯನ್ನು ಮಾರಾಟ ಮಾಡಲಾಗುವುದೆಂದು ನೋಟೀಸಿನಲ್ಲಿ ಸ್ಪಷ್ಟವಾಗಿ ತಿಳಿಸಿರಬೇಕು. ಹೀಗೆ ನೀಡಲಾದ ನೋಟೀಸಿಗೆ ಸ್ಪಂದಿಸದಿದ್ದಲ್ಲಿ ಮಾತ್ರ ನಿಯಮ 17(2) (ಡಿ) ಮೇರೆಗೆ ಈ ನಮೂನೆ–8ರಲ್ಲಿ ನೋಟೀಸು ನೀಡಬೇಕು.

ಈ ನಮೂನೆಯನ್ನು ಮಾರಾಟಾಧಿಕಾರಿಗಳು ವಸೂಲಾಧಿಕಾರಿಗಳ ಸಹಿಗಾಗಿ ಮಂಡಿಸುವಾಗ ನಿಗದಿಪಡಿಸಿದ ಚೆಕ್ ಲಿಸ್ಟ್‌ನಲ್ಲಿ ಮಾಹಿತಿಯನ್ನು ತಪ್ಪದೇ ಒದಗಿಸಬೇಕು.

ಈ ನಮೂನೆಯು ಜಪ್ತಿ ಮಾಡಲಾದ ಸ್ಥಿರ ಸ್ವತ್ತುಗಳ ವಿವರಗಳನ್ನು ನಮೂದಿಸಿ ಸದರಿ ಸ್ಥಿರಾಸ್ತಿಯನ್ನು ಬಹಿರಂಗ ಹರಾಜಿಗೆ ತಂದ ಬಗ್ಗೆ ದಿನಾಂಕ ನಿಗದಿಪಡಿಸಿ ವಿಷಯವನ್ನು ಪ್ರಚುರಪಡಿಸಲು ವಸೂಲಾಧಿಕಾರಿಗಳು 30 ದಿನಗಳ ಮುಂಚಿತವಾಗಿ ಸಾಲಗಾರನಿಗೆ/ ಜಾಮೀನುದಾರನಿಗೆ ನೀಡುವ ಬಹಿರಂಗ ಹರಾಜು ನೋಟೀಸು/ ಘೋಷಣೆ. ಇದರ ಪ್ರತಿಯನ್ನು ವಸೂಲಾಧಿಕಾರಿಯವರ ಕಛೇರಿ ಹಾಗೂ ತಾಲ್ಲೂಕು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕಳುಹಿಸಬೇಕು.

**ನಮೂನೆ : 9**

ಮೇಲ್ಕಾಣಿಸಿದಂತೆ ಜಪ್ತಿ ಮಾಡಲಾದ ಸ್ಥಿರ ಸ್ವತ್ತುಗಳ ವಿವರಗಳನ್ನು ನಮೂದಿಸಿ ಸದರಿ ಸ್ಥಿರಾಸ್ತಿಯನ್ನು ಬಹಿರಂಗ ಹರಾಜು ಮಾಡಲಿರುವ ವಿಷಯವನ್ನು ಬಾಕಿದಾರನಿಗೆ ಮತ್ತು ಡಿಕ್ರಿ ಹೊಂದಿದವನಿಗೆ ವಸೂಲಾಧಿಕಾರಿಗಳು 30 ದಿನಗಳ ಮುಂಚಿತವಾಗಿ ತಿಳಿಸುವ ಮಾರಾಟದ ನೋಟೀಸು.

**ಬಹಿರಂಗ ಹರಾಜು ಮೂಲಕ ಸ್ಥಿರಾಸ್ತಿ ಮಾರಾಟ ಮಾಡುವ ಪ್ರಕ್ರಿಯೆಯಲ್ಲಿ ಅನುಸರಿಸಲೇಬೇಕಾದ ಪ್ರಮುಖ ಅಂಶಗಳು :**

- ಹರಾಜು ದಿನಾಂಕಕ್ಕಿಂತ ಮುಂಚಿತವಾಗಿ ಸತತ 3 ದಿನಗಳವರೆಗೆ ಡಂಗುರ ಸಾರಿದ ಬಗ್ಗೆ ವರದಿ. (ಸೌಹಾರ್ದ ಸಹಕಾರಿ/ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನ ಸಮ್ಮುಖದಲ್ಲಿ ಸಹಿ ಮಾಡಿದ ದಾಖಲಾತಿ)
- ಮಾರಾಟಾಧಿಕಾರಿಯಿಂದ ಹರಾಜು ಪ್ರಕಟಣೆ.
- ಟಾಂಟಾಂ ಹಾಕಿದವನ ಹೆಸರು, ಸಹಿ ಮತ್ತು ದಿನಾಂಕ.
- ಪಂಚಯಾದಾಸ್ತಾ : ಪಂಚಮತಿ ಕಿಮ್ಮತ್ತು ಕಟ್ಟಿದ ಕುರಿತು ದಾಖಲಾತಿ. ಪಂಚರಿಂದ ಕಟ್ಟಡದ ಚಕ್ಕುಬಂದಿ, ಕಿಮ್ಮತ್ತು, ಲಿಲಾವಿನ ಷರತ್ತುಗಳು, ಲಿಲಾವ ಜರುಗುವಾಗ ಲಿಲಾವಿನಲ್ಲಿ ಭಾಗವಹಿಸಿ ಬೇಡಿದವರ ಹೆಸರು ಮತ್ತು ವಿಳಾಸ, ಅತಿ ಹೆಚ್ಚಿನ ಬೇಡಿಕೆ, ಮುಂತಾದವುಗಳ ವಿವರಗಳನ್ನು ನಮೂದಿಸಿ ಮಾರಾಟಾಧಿಕಾರಿ ಸಹಿ ಮಾಡಿದ ದಾಖಲಾತಿ.
- ಖರೀದಿಗಾರ ಅತಿ ಹೆಚ್ಚಿನ ಮೊತ್ತಕ್ಕೆ ಬೇಡಿದ ಬಗ್ಗೆ, ಹರಾಜಿನ ಸ್ಥಳದಲ್ಲಿಯೇ ತಕ್ಷಣ 25% ಹಣದ ಮೊತ್ತವನ್ನು ಸ್ಟಾಂಪ್ ವೆಚ್ಚ ಸಹಿತ 45 ದಿನಗಳೊಳಗಾಗಿ ಜಮಾ ಮಾಡುವ ಬಗ್ಗೆ ಸಲ್ಲಿಸಿದ ಹೇಳಿಕೆಯನ್ನು ಖರೀದಿದಾರರ ಸಹಿಯೊಂದಿಗೆ ದಾಖಲಾತಿ ಪಡೆಯಬೇಕು.
- ಮಾರಾಟಾಧಿಕಾರಿಯಿಂದ ನಡೆಸಲ್ಪಟ್ಟ ಸ್ಥಿರಾಸ್ತಿ ಬಹಿರಂಗ ಹರಾಜಿನ ನಡವಳಿಕೆಗಳು.

**ಬಹಿರಂಗ ಹರಾಜಿನ ನಂತರ :**

ಅ) ಮಾರಾಟಾಧಿಕಾರಿಯು ಸಂಪೂರ್ಣ ಬಾಕಿ ಸಾಲದ ಮೊತ್ತ ಮತ್ತು ಖರೀದಿಗಾರರ ಬಹಿರಂಗ ಹರಾಜಿನ ದಿನದಂದು ಕೂಗಿದ ಅತಿ ಹೆಚ್ಚಿನ ಮೊತ್ತದ ಹಣದ 5% ರಷ್ಟು ಮೊತ್ತದ ಹಣವನ್ನು ಹರಾಜಿನ ದಿನಾಂಕದಿಂದ 30 ದಿನಗಳೊಳಗಾಗಿ ಬ್ಯಾಂಕಿಗೆ ಪಾವತಿ ಮಾಡಿದಲ್ಲಿ ಸ್ಥಿರಾಸ್ತಿಯನ್ನು ಬಿಟ್ಟುಕೊಡಲಾಗುವುದೆಂದು ತಿಳಿಯಪಡಿಸುವ ಪತ್ರವನ್ನು ಸಾಲಗಾರನಿಗೂ ಮತ್ತು

ಬ) ಬಿಡ್ ಮೊತ್ತದ ಉಳಿದ 75% ಹಣದ ಮೊತ್ತವನ್ನು ಸ್ಟಾಂಪ್ ವೆಚ್ಚ ಸಹಿತ ಹರಾಜಿನ ದಿನಾಂಕದಿಂದ 45 ದಿನಗಳೊಳಗಾಗಿ ಸೌಹಾರ್ದ ಸಹಕಾರಿ/ ಬ್ಯಾಂಕಿಗೆ ಪಾವತಿ ಮಾಡದಿದ್ದಲ್ಲಿ ಈಗಾಗಲೇ ಹರಾಜಿನ ದಿನಾಂಕದಂದು ಠೇವಣಿ ಮಾಡಿದ ಹಣದ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಈ ಕ್ರಮದಿಂದಾಗಿ ಸ್ಥಿರಾಸ್ತಿ ಮೇಲೆ ಯಾವ ಹಕ್ಕೂ ಉಳಿಯುವುದಿಲ್ಲವೆಂದೂ ತಿಳಿಯಪಡಿಸುವ ಪತ್ರವನ್ನು ಖರೀದಿದಾರನಿಗೂ ತಪ್ಪದೇ ಕಳಿಸಬೇಕು.

**ನಮೂನೆ : 10**

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 17(7)ರ ಮೇರೆಗೆ ಬಹಿರಂಗ ಹರಾಜಿನ 45 ದಿನಗಳ ನಂತರ ವಸೂಲಾಧಿಕಾರಿಗಳು ನೀಡುವ ಪ್ರಮಾಣಪತ್ರ.

**ನಮೂನೆ : 11**

ಮೇಲೆ ನಮೂದಿಸಲಾದ ನಿಯಮದಡಿಯಲ್ಲಿಯೇ ಬಹಿರಂಗ ಹರಾಜಿನಲ್ಲಿ ಸ್ಥಿರಾಸ್ತಿ ಖರೀದಿಸುವುದಕ್ಕೆ ವಸೂಲಾಧಿಕಾರಿಗಳಿಂದ ಹೊರಡಿಸಲಾದ ಪ್ರಕಟಣೆ. ಇದನ್ನು ರಾಜ್ಯ ಗೆಜೆಟ್ಟಿನಲ್ಲಿ ಪ್ರಕಟಿಸಲಾಗುತ್ತದೆ.

**ಒಂದು ವೇಳೆ ಸ್ಥಿರಾಸ್ತಿಯು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಲು ಸಾಧ್ಯವಾಗದಿದ್ದಲ್ಲಿ :**

ಸ್ಥಿರಾಸ್ತಿಯು ಎಷ್ಟೇ ಪ್ರಯತ್ನಿಸಿದರೂ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲು ಸಾಧ್ಯವೇ ಆಗದಂತಹ ಪ್ರಸಂಗದಲ್ಲಿ ವಸ್ತುಸ್ಥಿತಿಯ ನಿರೂಪಣೆಯೊಂದಿಗೆ ಮಾರಾಟಾಧಿಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 18ರ ಮೇರೆಗೆ ಡಿಕ್ರಿ ಹೊಂದಿದ ಸೌಹಾರ್ದ ಸಹಕಾರಿ/ ಬ್ಯಾಂಕು ಸಾಲ ಬಾಕಿಗಾಗಿ ಸ್ಥಿರಾಸ್ತಿಯನ್ನು ವರ್ಗಾವಣೆ ಮಾಡಿಕೊಳ್ಳಲು ಬದ್ಧವಿದೆಯೇ ಎಂಬ ಬಗ್ಗೆ ಸದರಿ ಬ್ಯಾಂಕಿಗೆ ವರದಿಯೊಂದಿಗೆ ಪತ್ರ ಬರೆಯಬೇಕು ಮತ್ತು ವಸೂಲಾಧಿಕಾರಿಗಳಿಗೆ ವರದಿ ಸಲ್ಲಿಸಬೇಕು.

ಈ ಪ್ರಸ್ತಾವನೆಯನ್ನು ಸೌಹಾರ್ದ ಸಹಕಾರಿ/ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನ ಸದರಿ ಬ್ಯಾಂಕಿನ ಆಡಳಿತ ಮಂಡಲಿ ಗಮನಕ್ಕೆ ತರಬೇಕು. ಒಂದು ವೇಳೆ ಆಡಳಿತ ಮಂಡಲಿ ಒಪ್ಪಿದ್ದಲ್ಲಿ ಸೂಕ್ತ ಲಿಖಿತ ಅರ್ಜಿಯನ್ನು ಆಡಳಿತ ಮಂಡಲಿ ಠರಾವಿನೊಂದಿಗೆ ವರದಿ/ ಪತ್ರ ತಲುಪಿದ 6 ತಿಂಗಳೊಳಗಾಗಿ ವಸೂಲಾಧಿಕಾರಿಗಳಿಗೆ ಸಲ್ಲಿಸಬೇಕು.

ವಸೂಲಾಧಿಕಾರಿಗಳು ಸಾಲಗಾರರಿಗೆ (ಸ್ಥಿರಾಸ್ತಿಯಲ್ಲಿ ಹಕ್ಕು ದಾಖಲಾತಿಯಲ್ಲಿ ಹೆಸರಿರುವವರಿಗೆ ಮತ್ತು ಸ್ವತ್ತಿನಲ್ಲಿ ಹಿತಾಸಕ್ತಿ ಹೊಂದಿದ್ದಾರೆಂದು ತಿಳಿದಿರುವ ಎಲ್ಲಾ ವ್ಯಕ್ತಿಗಳಿಗೆ) ಉದ್ದೇಶಿತ ಆಸ್ತಿ ವರ್ಗಾವಣೆ ಬಗ್ಗೆ ತಿಳಿಸುತ್ತಾ ಈ ಹಂತದಲ್ಲಾದರೂ ಬಾಕಿ ಸಾಲ ತಿರುವಳಿ ಮಾಡಲು ಠೇವಣಿ ಇಡುವಂತೆ ಸೂಚಿಸಿ 30 ದಿನಗಳ ಗಡುವು ನಿಗದಿಪಡಿಸಿ ನೋಟೀಸು ನೀಡಬೇಕು.

**ನಮೂನೆ : 12**

ಅವಧಿ ಮುಕ್ತಾಯದ ನಂತರ ನೋಟೀಸಿಗೆ ಸ್ಪಂದಿಸದ ಸಾಲಗಾರರ/ ಜಾಮೀನುದಾರರ ಸ್ಥಿರಾಸ್ತಿಯನ್ನು ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 18ರ ಮೇರೆಗೆ ಡಿಕ್ರಿ ಹೊಂದಿದ ಸೌಹಾರ್ದ ಸಹಕಾರಿ/ ಬ್ಯಾಂಕಿಗೆ ವರ್ಗಾವಣೆ ಮಾಡಿ ನಮೂನೆ–12ರಲ್ಲಿ ಷರತ್ತುಗಳನ್ನು ವಿಧಿಸಿ ಪ್ರಮಾಣ ಪತ್ರ/ ದೃಢೀಕರಣ ಪತ್ರ ನೀಡಬೇಕು.

**ಸಾಲಗಾರನು/ ಜಾಮೀನುದಾರರು ನೌಕರರಾಗಿದ್ದಲ್ಲಿ :**

ಅವರ ಸಂಬಳ ಜಪ್ತಿ ಮಾಡುವುದಕ್ಕಿಂತ ಮುಂಚೆ ಬಾಕಿ ಸಾಲ ತೀರುವಳಿ ಮಾಡಲು ಗಡುವು ನಿಗದಿಪಡಿಸಿ ವಸೂಲಾಧಿಕಾರಿಗಳು ಪೂರ್ವಭಾವಿ ನೋಟೀಸು ನೀಡಬೇಕು. ಸದರಿ ನೋಟೀಸಿಗೆ ಸಾಲಗಾರನು/ ಜಾಮೀನುದಾರರು ಸ್ಪಂದಿಸದಿದ್ದಲ್ಲಿ ವಸೂಲಾಧಿಕಾರಿಗಳು ಸಂಬಳ ಜಪ್ತಿ ಮಾಡಿ ಸಂಬಳ ಬಟವಾಡೆ ಅಧಿಕಾರಿಗೆ ಸೂಕ್ತ ಆದೇಶ ನೀಡಬೇಕು. (ನಿಯಮ 16(1)).

ಸೌಹಾರ್ದ ಸಹಕಾರಿ ಬ್ಯಾಂಕುಗಳಿಗೆ/ ಸಹಕಾರಿಗಳಿಗೆ ಸಂಬಂಧಿಸಿದಂತೆ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 16(1)ರ ಪ್ರಕಾರ ಕೈಗೊಳ್ಳಲಾಗುವ ಈ ತೆರನಾದ ಕ್ರಮವಾಗಿ ಮಾರಾಟಾಧಿಕಾರಿಯು ವಸೂಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವಾಗ ನಿಗದಿಪಡಿಸಲಾದ 'ಚೆಕ್‌ಲಿಸ್ಟ್'ನಲ್ಲಿ ಸಂಪೂರ್ಣ ಮಾಹಿತಿಯನ್ನು ತಪ್ಪದೇ ಒದಗಿಸಬೇಕು.

**ನೆನಪಿರಲಿ :**

- ಅಮಲ್ ಬಜಾವಣೆ ಅರ್ಜಿ ದಾಖಲಾತಿ ರಿಜಿಸ್ಟರ್‌ನಲ್ಲಿ ಪ್ರಾರಂಭದಿಂದ ಅಂತ್ಯದವರೆಗಿನ ಸಂಪೂರ್ಣ ಮಾಹಿತಿಯನ್ನು ದಾಖಲಿಸಬೇಕು.
- ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 15 (ಸಿ) ಪ್ರಕಾರ ಬೆಳಿಗ್ಗೆ 6.00 (ಸೂರ್ಯೋದಯ)ಕ್ಕಿಂತ ಮುಂಚೆ ಮತ್ತು ಸಂಜೆ

ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 7



# “ಜೀವನಾವಶ್ಯಕ ಆಹಾರ, ನೀರು, ಗಾಳಿ ಹಾಗೂ ವಸ್ತ್ರಗಳು ಭೂಮ್ಯಾಕಾಶಗಳ ಯಂತ್ರ ಸಂಘದುತ್ಪನ್ನಗಳು”ಮಾನವನ ಬದುಕಿಗೆ ಇವುಗಳೇ ಸಹಕಾರ

▸▸ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಸೃಷ್ಟಿಸ್ಥಿತಿಲಯ ಕರ್ತನಾದ ಭಗವಂತನು ಪ್ರಸಕ್ತದ ಸೃಷ್ಟಿಯ ಪೂರ್ವ ತಾನೊಬ್ಬನೇ ಒಬ್ಬಂಟಿಯಾಗಿರುವುದು ಬೇಸರವೆನಿಸಿದ ಕಾರಣ ತಾನೇ ತನ್ನ ಸ್ವಮಹಿಮೆಯಿಂದ ಬಹು ಆತ್ಮಗಳ ಈ ಪ್ರಪಂಚವಾಗಿ ಪರಿವರ್ತಿತನಾಗಿ ತನ್ನ ಸೃಷ್ಟಿಯಲ್ಲಿ ಸಸ್ಯ, ಜೀವಿ ಹಾಗೂ ಮಾನವರನ್ನು ಸೃಷ್ಟಿಸಿ, ಇಂತಹ ಸೃಷ್ಟಿಕಾರ್ಯದಲ್ಲಿ ಮಾನವನನ್ನು ಅತ್ಯುನ್ನತವಾದ ಚಿಂತನಶೀಲ ಶಿಖರಪ್ರಾಯ ಸೃಷ್ಟಿಯನ್ನಾಗಿಸಿದನಂತೆ.

ಹೀಗೆ ಸೃಷ್ಟಿಸಲ್ಪಟ್ಟ ಮಾನವನ ಸುಖಕರ ಬದುಕಿಗೆ ಎಲ್ಲಾ ಸೌಲಭ್ಯಗಳು ದೊರಕಲೆಂದು ಮಾನವನಿಗೆ ಪಂಚೇಂದ್ರಿಯಗಳನ್ನು ವಿಶ್ವನಿರ್ವಹಣೆಗಾಗಿ ಪಂಚಭೂತಗಳನ್ನು ನಿರ್ಮಿಸಿರುತ್ತಾನೆ.

ಮನುಷ್ಯನ ಜೀವನ ಸುಖಮಯವಾಗಿರಬೇಕಾದರೆ ಆತನಿಗೆ ಉಣ್ಣಲು ಆಹಾರ, ಉಸಿರಾಡಲು ಗಾಳಿ, ಬಾಯಾರಿಕೆ ತಣಿಸಿಕೊಳ್ಳಲು ನೀರು ಹಾಗೂ ಮಾನಕಾಪಾಡಿಕೊಳ್ಳಲು ಬಟ್ಟೆ ಇವುಗಳು ಅತ್ಯವಶ್ಯಕವೆನಿಸಿದ ಕಾರಣ ಇವುಗಳೆಲ್ಲವೂ ದೊರಕುತ್ತಿರಲೆಂದು ಪ್ರಕೃತಿಯಲ್ಲಿನ ಅಗ್ನಿ, ಆಕಾಶ, ಭೂಮಿ, ವರುಣ, ವಾಯುಗಳನ್ನು ಸೃಷ್ಟಿಸಿ ತನ್ನ ಮಕ್ಕಳ ಕ್ಷೇಮರಕ್ಷಣೆಯನ್ನು ನೋಡಿಕೊಂಡಿರುತ್ತಾನೆ ಈ ಒಂದು ವ್ಯವಸ್ಥೆಯನ್ನು ಕಂಡು ಡಿವಿಜಿಯವರು ತಮ್ಮ ಪರಮಾದ್ಭುತ ಕಾವ್ಯಶಕ್ತಿಯಿಂದ ಈ ಕೆಳಗಿನ ಪದ್ಯನ್ನು ಹೊರ ತಂದಿದ್ದಾರೆ.

"ನಾವುಣುವನ್ನಗಳು ನಾವು ಕುಡಿವುದಕಗಳು
ನಾವುಸಿರುವೆಲರುಗಳು ನಾವುಡುವ ವಸ್ತ್ರ
ಭೂವ್ಯೋಮಗಳ ಯಂತ್ರ ಸಂಘದುತ್ಪನ್ನಗಳು
ಜೀವವೆರಡರ ಶಿಶುವು ಮಂಕುತಿಮ್ಮ"

ಈ ಬದುಕಿನ ಅವಶ್ಯಕತೆಗಳಾದ ಅನ್ನ, ನೀರು, ಗಾಳಿ ಹಾಗೂ ಉಡುಪುಗಳು ಭೂವ್ಯೋಮಗಳ ಯಂತ್ರ ಸಂಘದುತ್ಪನ್ನಗಳೆಂದು ಕರೆದು, ಜೀವವನ್ನು ಭೂವ್ಯೋಮಗಳ ಶಿಶುವೆಂದು ಸಹ ಕರೆದಿದ್ದಾರೆ. ತನ್ಮೂಲಕ ವಿಶ್ವವನ್ನು ಒಂದು “ಕೈಗಾರಿಕಾ ಸಹಕಾರ ಸಂಘವೆಂದಿದ್ದಾರೆ. ನಾವು ಮಾನವರು ಭೂವ್ಯೋಮಗಳ ಶಿಶುಗಳಾಗಿದ್ದು, ಭೂವ್ಯೋಮಗಳ ಯಂತ್ರ ಸಂಘದುತ್ಪನ್ನಗಳನ್ನು ಸ್ವೀಕರಿಸಿ ಬೆಳೆಯುತ್ತಿದ್ದೇವಾದ ಕಾರಣ ನಮ್ಮ ಶ್ವಾಸಶ್ವಾಸದಲ್ಲಿಯೂ ಸಹಕಾರದ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂಬುದು ಕವಿಯವರ ಮನೋಇಂಗಿತವಾಗಿದೆ ಅದರಂತೆ ಅಳವಡಿಸಿಕೊಳ್ಳೋಣ ಸಹಕಾರದ ಹೆಜ್ಜೆಯನ್ನು ನಿತ್ಯಜೀವನದಲ್ಲಿ.

... ಹಿಂದಿನ ಪುಟದಿಂದ

6.00 (ಸೂರ್ಯಾಸ್ತ)ದ ನಂತರ ಜಪ್ತಿ ಕಾರ್ಯ ಕೈಗೊಳ್ಳಕೂಡದು.

- ನಮೂನೆ–4/2 ರಲ್ಲಿನ (ಯಾವುದು ಅನ್ವಯವಾಗುತ್ತದೋ ಆ ನಮೂನೆ/ಫಾರ್ಮ್) ತಗಾದೆ ನೋಟೀಸನ್ನು ಕಟ್ ಬಾಕಿದಾರನ ಮೇಲೆ ಜಾರಿ ಮಾಡದೆ ಆತನ ವಾಸಸ್ಥಾನದಲ್ಲಿ ಪ್ರವೇಶ ಮಾಡಲು ಬರುವುದಿಲ್ಲ. ಹಾಗೆ ಮಾಡಿದಲ್ಲಿ ಅದು ಐಪಿಸಿ ಅಡಿಯಲ್ಲಿ ‘ಟ್ರೆಸ್‌ಪಾಸ್’ ಅಪರಾಧವಾಗುತ್ತದೆ.
- ಸಾಲಗಾರ/ ಜಾಮೀನುದಾರರ ಯಾವುದೇ ಚರಾಸ್ತಿ ಅಥವಾ ಸ್ಥಿರಾಸ್ತಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 17(1) ರ ಜಪ್ತಿ ಮಾಡದೆ ಮಾರಾಟ ಮಾಡುವಂತಿಲ್ಲ.
- ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರಕರಣ 43 ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 13 ರಿಂದ 27 ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ 60ನೇ ಪ್ರಕರಣದಲ್ಲಿನ ನಿಯಮಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

**ಸಿ.ಪಿ.ಸಿ. 1908ರ ಕಲಂ 60ರ ಮೇರೆಗೆ ಜಪ್ತಿ ಮಾಡಲು ವಿನಾಯಿತಿ ಇರುವ ವಸ್ತುಗಳು**

1. ಧರಿಸುವ ಉಡುಪು
2. ಅಡಿಗೆ ಪಾತ್ರೆಗಳು
3. ಹಾಸಿಗೆಗಳು
4. ಧಾರ್ಮಿಕ ಪದ್ಧತಿ ಪ್ರಕಾರ ಸ್ತ್ರೀಯರು ಯಾವಾಗಲೂ ಧರಿಸಲೇ ಬೇಕಾಗಿರುವ ಆಭರಣಗಳು
5. ಕಾರ್ಮಿಕರಾಗಿದ್ದರೆ ಕಾರ್ಮಿಕ ಉದ್ಯೋಗದ ಉಪಕರಣಗಳು
6. ಕೃಷಿಕನಾಗಿದ್ದರೆ ಬೇಸಾಯದ ಉಪಕರಣಗಳು
7. ಬಿತ್ತನೆಗಾಗಿ ಇಟ್ಟ ಬೀಜಗಳು
8. ಬೇಸಾಯಕ್ಕೆ/ ಒಕ್ಕಲುತನಕ್ಕೆ ಅವಶ್ಯವಿರುವ ಜಾನುವಾರುಗಳು ಅಂದರೆ 2 ಎತ್ತುಗಳು
9. ರೈತನ ಒಡೆತನ ಹಾಗೂ ವಾಸಿಸುವ ಮನೆ
10. ಲೆಕ್ಕದ ಪುಸ್ತಕಗಳು
11. ನೌಕರನಾಗಿದ್ದರೆ ನಿವೃತ್ತ ವೇತನ (ಪೆನ್ಷನ್)/ ನೌಕರರ ವೇತನದ ಅರ್ಧಭಾಗ ಅಥವಾ ವೇತನವು 100 ರೂ.ಗೆ ಮೀರದಿದ್ದರೆ ಪೂರ್ತಿಯಾಗಿ
12. ಸೈನಿಕರಾಗಿದ್ದರೆ ಸೈನಿಕರ ಪೂರ್ಣ ವೇತನ ಹಾಗೂ ಭತ್ಯೆ
13. ಕಡ್ಡಾಯ ಠೇವಣಿಗಳು
14. ಕೂಲಿಕಾರರ ಹಾಗೂ ಕಾರ್ಮಿಕರ ಮಜೂರಿ
15. ಕೃಷಿ ಉತ್ಪನ್ನಗಳಲ್ಲಿ ಪ್ರತಿ ಮಾಹೆಗಾಗಿ ವಯಸ್ಕರಿಗೆ (12 ವರ್ಷ ಮೇಲ್ಪಟ್ಟವರು)

ತಲಾ 20 ಕಿಲೋ ಅಕ್ಕಿ (ಭತ್ತವಾದರೆ 40 ಕಿಲೋ) ಅಥವಾ ತಲಾ 20 ಕಿಲೋ ಗೋಧಿ ಅಥವಾ ತಲಾ 20 ಕಿಲೋ ರಾಗಿ ಅಥವಾ ತಲಾ 20 ಕಿಲೋ ಜೋಳ ಅಥವಾ ತಲಾ 20 ಕಿಲೋ ಇತರೆ ಕಾಳುಗಳು ಮತ್ತು 12 ವರ್ಷಕ್ಕಿಂತ ಕೆಳಗಿನವರಿಗೆ ಮೇಲೆ ನಮೂದಿಸಲಾದ ಪ್ರಮಾಣದ ಅರ್ಧದಷ್ಟು.



# RBI NEWS-OCTOBER-2016

**K. Vittal Shetty,** kohimavittal@hotmail.com. Mobile : 9845699904

Fourth Bi-monthly Monetary Policy Statement, 2016-17 Resolution of the Monetary Policy Committee (MPC), Reserve Bank of India On the basis of an assessment of the current and evolving macroeconomic situation at its meeting today, the Monetary Policy Committee (MPC) decided to:

• reduce the policy repo rate under the liquidity adjustment facility (LAF) by 25 basis points from 6.5 per cent to 6.25 per cent with immediate effect.

Consequently, the reverse repo rate under the LAF stands adjusted to 5.75 per cent, and the marginal standing facility (MSF) rate and the Bank Rate to 6.75 per cent.

The decision of the MPC is consistent with an accommodative stance of monetary policy in consonance with the objective of achieving consumer price index (CPI) inflation at 5 per cent by Q4 of 2016-17 and the medium-term target of 4 per cent within a band of +/- 2 per cent, while supporting growth.

The next meeting of the MPC is scheduled on December 6 and 7, 2016 and its resolution will be announced on December 7, 2016

| Policy Rates with effect from 04 October 2016. | % |
|---|---|
| POLICY REPO RATE | 6.25% |
| REVERSE REPO RATE | 5.75% |
| MARGINAL STANDING FACILITY RATE | 6.75% |
| BANK RATE | 6.75% |
| Reserve Ratios | % |
| Cash Reserve Ratio | 4.00% |
| Statutory Reserve Ratio | 20.75% |

## I.IMPORTANT NEWS

**Date : Oct 06, 2016 :** Report of the Internal Working Group (IWG) on Rationalisation of Branch Authorisation Policy.

RBI placed on its website, the Report of the Internal Working Group (IWG) on Rationalisation of Branch Authorisation Policy. Suggestions/comments, if any, on the recommendations contained in the Report, may be sent by email on or before November 5, 2016.

### Recommendations

The thrust of the recommendations is to facilitate financial inclusion by ensuring availability of banking services in all centers through low cost delivery channels and mapping the footprints of various banking channels. The Group has recommended a two-phased approach.

The key recommendations of the IWG are as under:

A. In the first phase, the recommendations focus on broadening of the current framework to include all 'banking outlets' which are fixed point locations and bring them on par with branches.

i) A 'banking outlet' has been defined as "a fixed-point service delivery unit, manned by either bank's staff or its Business Correspondent where services of acceptance of deposits, encashment of cheques/cash withdrawal or lending of money are provided for a minimum of 4 hours per day for at least five days a week. It carries uniform signage with name of the bank and authorisation from it, contact details of the controlling authorities and complaint escalation mechanism. The bank should have a regular off-site and on-site Monitoring of the 'banking outlet' to ensure proper supervision, 'uninterrupted service' and timely addressing of customer grievances. The working hours/days need to be displayed prominently."

Any other fixed point service delivery unit of the bank which does not comply with the above prescription regarding minimum working hours/days will be considered a 'part-time banking outlet'.

ii) Banks to open banking outlets subject to their meeting the 25 per cent norm of opening banking outlets in unbanked rural centres. An unbanked rural centre (URC) has been redefined as a "rural (tier 5 and 6) centre that does not have a CBS-enabled 'banking outlet' (including a fixed point BC outlet) of a Scheduled Commercial Bank or a CBS-enabled Regional Rural Bank, Local Area Bank, licensed Co-operative Bank or any other CBS-enabled bank licensed by the Reserve Bank for carrying out customer based banking transactions".

A part-time banking outlet opened in any Centre will be counted and added to the denominator as well as numerator on pro rata basis for computing the requirement as well as compliance with the norm of opening 25% banking outlets in unbanked rural centres.

**Date : Oct 24, 2016:- ATM/Debit Card Data Breach**

National Payment Corporation of India and card network operators to review the steps taken by various agencies to contain the adverse fall out of certain card details alleged to

have been compromised. It had come to the Reserve Bank's notice on September 8, 2016 that details of certain cards issued by a few banks had been possibly compromised at Automated Teller Machines (ATMs) linked to the ATM Switch of one of the service providers. The issue is currently being investigated by an approved forensic auditor, under PCI-DSS framework. The number of cards misused, as per currently available information, is small. The Reserve Bank has urged the cardholding bank customers that it is a good practice to change the PIN and passwords periodically and not to share them with anyone for any reason. It has also cautioned that banks do not ask for card or account details from their customers. Customers may, therefore, exercise caution and not reveal such information to any person on phone or email.

**Oct 26, 2016:- Circulation of Counterfeit (fake) Currency Notes – Public Notice**

Circulation Fake Indian Currency Notes of higher denominations in the course of normal transactions, taking advantage of the gullible and unsuspecting nature of some members of the public.

RBI cautions the public to subject notes that are accepted to careful scrutiny. Genuine Indian Currency Notes of higher denominations have strong counterfeit resistant security features. The fake notes can be identified on closer inspection. Detailed information on the security features on the banknotes are available on our website, https://paisaboltahai.rbi.org.in/, and the public may familiarize themselves with these features and educate others also.

**October 27, 2016:-Detection and Impounding of Counterfeit Notes**

Some unscrupulous elements are putting into circulation Fake Indian Currency Notes of higher denominations in the course of normal transactions, taking advantage of the gullible and unsuspecting nature of some members of the public.

2. In the wake of the above, members of public have been requested to make it a habit of looking at the notes before accepting them in the usual course of daily transactions and help arrest the counterfeiting of Indian banknotes.

3. In this regard please refer to the Master Circular DCM (FNVD) No.G-6/16.01.05/2016-17 dated July 20, 2016, relating to Detection and Impounding of Counterfeit Notes wherein banks were advised to ensure that counterfeit notes making entry into the banking system are promptly detected and under no circumstance, returned to the tenderer or reissue them. Banks were also advised that with a view to facilitating the detection of counterfeit notes, all bank branches / identified back offices should be equipped with ultra-violet lamps / other appropriate banknote sorting / detection machines. Further, banks should ensure that cash receipts in the denominations of ₹ 100 and above are not put into re-circulation without the notes being machine processed for authenticity. The said instructions are applicable to all bank branches, irrespective of the volume of daily cash receipt. Any non-compliance will be construed as violation of the Directive No.3158/09.39.00 (Policy)/2009-10 dated November 19, 2009 issued by the Reserve Bank.

4. Banks should also ensure that cash handling staff at the frontline and back office are fully conversant with and well trained about the security features of a banknote. With a view to educating the branch staff and customers on detection of counterfeit notes, information available at our website https://paisaboltahai.rbi.org.in/ should be brought to their attention.

5. In order to facilitate identification of people abetting circulation of counterfeit notes, banks are advised to cover the banking hall/area and counters under CCTV surveillance and recording and preserve the recording.

Directions,Withdrwals,Penalties & Cancelleation of Licences of Urban Co-operative Banks.

**Oct 01, 2016:-** Extension of directions under Section 35A of the Banking Regulation Act, 1949 (AACS) Ajinkyatara Sahakari Bank Ltd., Satara, Maharashtra.

**Oct 03, 2016:-** RBI extends Directions issued to Shri Sai Urban Co-operative Bank Ltd., Mukhed Dist.Nanded, Maharashtra till December 31, 2016.

**Oct 05, 2016:-** RBI extends validity of the Directions issued to the Mercantile Urban Co-operative Bank Ltd., Meerut, Uttar Pradesh

**Oct 05, 2016:-** RBI extend Directions Gokul Co-operative Urban Bank Ltd., Secunderabad till April 04, 2017

**Oct 13, 2016:-** RBI extend Directions Jamkhed Merchants Co-operative Bank Ltd., Jamkhed, Ahmednagar, Maharashtra.

**Oct 14, 2016:-** RBI extends validity of Directions issued to the HCBL Co-operative Bank Ltd., Lucknow, Uttar Pradesh till April 15, 2017.

**Oct 14, 2016:-** RBI issues Directions to United India Co-operative Bank Ltd., Nagina, Bijnor, Uttar Pradesh – Withdrawal of Directions.

**Oct 19, 2016:-** RBI imposes penaltyof ₹ 10.00 lakh (Rupees Ten lakh only)on The Tumkur Veerashaiva Co-operative Bank Ltd.,Tumkur, Karnataka.

**Source: www.rbi.org.in, For Details Please refere RBI Website**



# CO OPERATIVE MOVEMENT IN INDIA AND ABROAD - THE ROAD AHEAD

**Satish Marathe,** Formar Secreatry Indian Bank Association

...(Cntd. From Last Issue)

These mechanisms recommend that there should be an 'early and complete disengagement of governments from the internal affairs of Co Operatives'. The ILO Recommendation No. 193 emphasises the need to promote Co Operatives for sustainable development and decent employment. While it does not advocate complete withdrawal of Government, it recommends an institutional framework by which the Government registers Co Operatives as simply and efficiently and regulates them the same way as other forms of enterprise, and provides a wide range of support such as human resource development, access to credit, services for marketing, etc all without infringing the autonomy of Co Operative.

The Co Operative sector is experiencing a renaissance despite many difficulties. A study of 11 countries in Africa estimates that around seven percent of Africans are members of Co Operatives and that even in countries where apex Co Operatives have collapsed, such as Uganda and Rwanda, the Co Operatives have continued to grow in large numbers.

There were only 554 Co Operatives registered in Uganda in 1995, but now there are nearly 7500 now. Savings and Credit Co Operatives are growing, including non-traditional sectors such as Housing, Consumer, Cottage industries and Distilleries. They are demand driven, market oriented, and bypassing the old Co Operative Unions they have favoured new networks. Farmer Co Operatives are meeting a growing demand of supermarkets for fresh fruit and vegetables. Coffee marketing Co Operatives are securing higher prices by adopting fair and transparent trade practices.

Electricity Co Operatives show that the Co Operative model can work in rural areas where the private sector does not want to go. It is to be noted that Electricity Co Operatives in the Philippines and Bangladesh are growing. Small Dairy Co Operatives are growing rapidly in Eastern Europe, Latin America, and Africa. There has been a major resurgence of marketing Co Operatives in Ethiopia, Zambia and Honduras.

Telecommunications Co Operatives are strong in Poland, Albania, Argentina, Bolivia. Credit Unions are growing in many countries and extending access to credit, savings and remittance services to the poor and migrant workers.

In Bolivia, Co Operatives have emerged as serious alternative to privatisation of water services for urban consumers.

Health professionals also sometimes find it useful to organize through a Co Operative, as in Brazil, where the biggest Co Operative medical system in the world has 367 local member Co Operatives operating in over 80 per cent of Brazil's counties with 98,000 doctors in membership, serving 12 million service patients. In Argentina, 58 per cent of rural electricity is supplied by Co Operatives, and they are also strong in Telecommunications.

In the case of Tanzania, for example, after a Presidential Commission analysed the problems faced by the Co Operatives, a new Co Operative law and Byelaws were enacted that ensured Co Operatives being run professionally and a process of re-elections in Co Operatives was undertaken that ensured that ineffective and corrupt board members were removed from management. This reform has led to strong growth in the Savings and Credit Co Operatives and in Coffee Co Operatives, in particular.

In another example, an Ethiopian reform process

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 24


which began in 1997, has led to growth of Co Operatives. Now more than 85 per cent of Ethiopia's total inputs in rural areas are distributed through Co Operatives, and over 75 per cent of its coffee is exported by Co Operatives.

Civil wars and ethnic conflicts have caused major disruptions and destroyed Co Operative infrastructure and social capital. Yet there is evidence that even during conflicts Co Operatives survive. In Sri Lanka and Nepal, they have been the only independent organisations allowed by both sides in the civil war zone. In post conflict era, Co Operatives have played a crucial role in restoring both the economy and civil society.

In East Timor, a network of 20,000 farmers has been formed, processing one third of the coffee for export. In Rwanda, a credit union system was rebuilt by the World Council of Credit Unions without regard to ethnicity, and now there are 149 unions with nearly 400,000 members. In Bosnia Cheese Co Operatives, and in Montenegro Dairy Co Operatives, have encouraged displaced refugees to return, while in El Salvador electricity Co Operatives have boosted the local economy enabling ex-combatants to find work.

Similar stories can be told of Guatemala, Lebanon, Azerbaijan, Serbia and Montenegro. There is also evidence of Co Operatives bridging longstanding ethnic divides; electricity Co Operatives in Bangladesh have a common membership among the 28 million users, and in India Dairy Co Operatives treat members of different castes equally.

Challenges Before Co Operatives in Developing Countries The preceding optimistic view has to be tempered with awareness of the constraints that Co Operatives in developing countries face.

A recent study of 450 Co Operatives in Tanzania and Sri Lanka reports that Co Operatives lack access to finance and need help to expand their activities. Other constraints include lack of new technology, training and leadership, lack of access to markets beyond their immediate locality and lack of knowledge about opportunities. Some Co Operatives are still held back by issues like over-regulation from Governments and poor internal governance which leads to trust deficit. Farmer Co Operatives need assistance to improve the quality of produce for export and Credit Co Operatives need to be strengthened to manage risk.

Similarly, low level of participation by women is a challenge faced by many Co Operatives, a problem that is worse in agricultural Co Operatives. In addition, the challenge of low level of involvement of young people and the need for their greater participation cannot be ignored.

Conclusion : There is a growing consensus among international agencies about their importance. The World Bank recognizes the role of Co Operatives in revitalizing the agricultural sector and the rural economy. In addition, an IMF survey, way back in2007 showed that "Co Operative Banks have become important parts of many financial systems, with attendant potential financial stability". Co Operatives may not be the complete solution to the world's problems, but they are certainly a significant part of the solution.

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ : 080-23449933/34.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010